## ಅಧ್ಯಾಯ 6

# ಮಹಾ ಪ್ರಳಯ:

# ನಾಶನ ಮತ್ತು ಸಂರಕ್ಷಣೆ

ಆದಿಕಾಂಡ ಪುಸ್ತಕವು 4ನೇ ಅಧ್ಯಾಯದಲ್ಲಿ ಕಾಯಿನನ ವಂಶಾವಳಿಯನ್ನು ಲೆಮೆಕ ಮತ್ತು ಆತನ ಮಕ್ಕಳ ಮೂಲಕವಾಗಿ ಸಾಗಿತು ಎಂದು ಗುರುತಿಸುತ್ತದೆ ಮತ್ತು 5ನೇ ಅಧ್ಯಾಯದಲ್ಲಿ ಸೇತನಿಂದ ನೋಹ ಮತ್ತು ಆತನ ಮೂವರು ಪುತ್ರರ (ಶೆಮ್, ಹಾಮ್, ಮತ್ತು ಯಾಪೆತ್) ಮೂಲಕ ಸಾಗಿತು ಎಂಬುದಾಗಿ ಗುರುತಿಸುತ್ತದೆ. 6ನೇ ಅಧ್ಯಾಯವು ಮುಂದಿನ ತಲೆಮಾರಿನ ವಿಶಿಷ್ಟತೆಯಾಗುವದಕ್ಕೆ ಆರಂಭಿಸಿದಂಥ ನೈತಿಕ ವಿಕೃತಿಯ ಕುರಿತಾಗಿ ಚರಿತ್ರೆಯನ್ನು ಮುಂದುವರೆಸುತ್ತದೆ.

## ದೇವಪುತ್ರರು ಮತ್ತು ಮನುಷ್ಯಪುತ್ರಿಯರು (6:1-4)

**1ಭೂಮಿಯ ಮೇಲೆ ಜನರು ಹೆಚ್ಚುತ್ತಾ ಅವರಿಗೆ ಹೆಣ್ಣು ಮಕ್ಕಳು ಹುಟ್ಟಲು 2ದೇವಪುತ್ರರು**
**ಮನುಷ್ಯಪುತ್ರಿಯರ ಸೌಂದರ್ಯವನ್ನು ನೋಡಿ ತಮಗೆ ಇಷ್ಟರಾದವರನ್ನು ಹೆಂಡರನ್ನಾಗಿ**
**ಮಾಡಿಕೊಂಡರು. 3ಆಗ ಯೆಹೋವನು - ನನ್ನ ಆತ್ಮವು ಮನುಷ್ಯರಲ್ಲಿ ಶಾಶ್ವತವಾಗಿರುವದಿಲ್ಲ;**
**ಅವರು ಭ್ರಷ್ಟರಾದದರಿಂದ ಮರ್ತ್ಯರೇ. ಅವರ ಆಯುಷ್ಯವು ನೂರ ಇಪ್ಪತ್ತು ವರುಷವಾಗಿರಲಿ**
**ಅಂದನು. 4ಆ ಕಾಲದಲ್ಲಿ ಅಂದರೆ ದೇವಪುತ್ರರು ಮನುಷ್ಯಪುತ್ರಿಯರನ್ನು ಕೂಡಿ ಅವರಲ್ಲಿ**
**ಮಕ್ಕಳನ್ನು ಪಡೆಯುವ ಕಾಲದಲ್ಲಿ ಮಹಾಶರೀರಿಗಳು ಭೂಮಿಯ ಮೇಲಿದ್ದರು;**
**ಅನಂತರದಲ್ಲಿಯೂ ಇದ್ದರು. ಪೂರ್ವದಲ್ಲಿ ಹೆಸರುಗೊಂಡ ಪರಾಕ್ರಮಶಾಲಿಗಳು ಇವರೇ.**

**ವಚನಗಳು 1, 2.** ಅಧ್ಯಾಯವು ಹೀಗೆ ತಿಳಿಸುವ ಮೂಲಕ ಆರಂಭಗೊಳ್ಳುತ್ತದೆ, **ಭೂಮಿಯ ಮೇಲೆ ಜನರು ಹೆಚ್ಚುತ್ತಾ ಅವರಿಗೆ ಹೆಣ್ಣು ಮಕ್ಕಳು ಹುಟ್ಟಿದರು**. ಈ ಹುಡುಗಿಯರು ವಯಸ್ಸಿಗೆ ಬಂದಾಗ, ದೇವಪುತ್ರರು **ಮನುಷ್ಯಪುತ್ರಿಯರ ಸೌಂದರ್ಯವನ್ನು ನೋಡಿ ತಮಗೆ ಇಷ್ಟರಾದವರನ್ನು ಹೆಂಡರನ್ನಾಗಿ ಮಾಡಿಕೊಂಡರು**.

ಲೇಖಕನು "ದೇವಪುತ್ರರು" ಎಂದು ಪ್ರಸ್ತಾಪಿಸಿದ ವೇಳೆ ಯಾರ ಕುರಿತಾಗಿ ಮಾತಾಡುತ್ತಿದ್ದಾನೆ? ಈ ಪದಗುಚ್ಛದ ಕನಿಷ್ಠ ಮೂರು ಅರ್ಥನಿರೂಪಣೆಗಳ ಬಗ್ಗೆ ವಾದಿಸಲಾಗಿರುತ್ತದೆ. ಮೊದಲನೆಯದು ಯಾವದೆಂದರೆ ಅದು ಪರಲೋಕದ, ದೇವದೂತರಂತಹ ಜೀವಿಗಳನ್ನು ಸೂಚಿಸುತ್ತದೆ ಎಂಬುದೆ (ನೋಡಿರಿ ಯೋಬ 1:6; 2:1). ಇದು 1 ಹನೋಕ ಪುಸ್ತಕದ ಯೆಹೂದಿ ಲೇಖಕನ ನಂಬಿಕೆಯಾಗಿತ್ತು, ಇದು ಕ್ರಿ.ಪೂ. ಎರಡನೆಯ ಶತಮಾನದ ಆರಂಭ ಭಾಗದಲ್ಲಿ ಬರೆಯಲ್ಪಟ್ಟ ಪ್ರೇರಿತವಲ್ಲದ ಪುಸ್ತಕವಾಗಿದೆ.[1] ಈ ದೈವಿಕ

ಜೀವಿಗಳು ಮನುಷ್ಯರ ರೂಪದಲ್ಲಿ ಭೂಮಿಗೆ ಇಳಿದು ಬಂದು "ಮನುಷ್ಯಪುತ್ರಿಯರ" ಸಂಗಡ ಸಂಭೋಗ ನಡಿಸಿದರೆಂದು ಹೇಳಲಾಗಿರುತ್ತದೆ, ಈ ಸ್ತ್ರೀಯರು ಬಳಿಕ ಅಸ್ವಾಭಾವಿಕವಾದ ರೀತಿಯಲ್ಲಿ ದುಷ್ಟರಾದ ದೈತ್ಯರಿಗೆ ("ನೆಫಿಲಿಮ್") ಜನ್ಮ ನೀಡಿದರು. ಇದು ಇಂದಿನ ತನಕವೂ ಒಂದು ಸಾಮಾನ್ಯವಾಗಿರುವ ವಿಚಾರವಾಗಿ ಉಳಿದಿರುತ್ತದೆ.[2]

ಯೇಸುವು ಮತ್ತಾಯ 22:30ರಲ್ಲಿ ನೀಡಿದ ಹೇಳಿಕೆಯ ನಿಮಿತ್ತವಾಗಿ ಇಂತಹ ಒಂದು ಅಭಿಪ್ರಾಯವು ತಿರಸ್ಕರಿಸಲ್ಪಡತಕ್ಕದ್ದು. ಪುನರುತ್ಥಾನದಂದು ಮನುಷ್ಯರು ದೇವದೂತರಂತೆ (ದೈವಿಕ ಜೀವಿಗಳು) ಇರುವರು ಎಂದು ಹೇಳಿದನು, ಈ ದೂತರು "ಮದುವೆಮಾಡಿಕೊಳ್ಳುವದೂ ಇಲ್ಲ, ಮಾಡಿಕೊಡುವದೂ ಇಲ್ಲ." ಜನರು (ಹೊರತು ದೇವದೂತರಲ್ಲ[3]) "ನೋಹನು ನಾವೆಯಲ್ಲಿ ಸೇರಿದ ದಿನದ ತನಕ ... ಉಣ್ಣುತ್ತಾ ಕುಡಿಯುತ್ತಾ ಮದುವೆಮಾಡಿಕೊಳ್ಳುತ್ತಾ ಮಾಡಿಕೊಡುತ್ತಾ ಇದ್ದರು" (ಮತ್ತಾಯ 24:38). ಲೂಕನ ಕಥನದ ಪ್ರಕಾರವಾಗಿ, ಯೇಸುವು ಸೇರಿಸಿ ಹೇಳಿದ್ದೇನೆಂದರೆ ಸತ್ತವರು "ಇನ್ನು ಮರಣಕ್ಕೆ ಗುರಿಯಾಗುವದೇ ಇಲ್ಲ ... ದೇವದೂತರಿಗೆ ಸರಿಸಮಾನರೂ ... ಆಗಿದ್ದಾರೆ" (ಲೂಕ 20:35, 36). ದೇವದೂತರು ಮರಣವಿಲ್ಲದ ಜೀವಿಗಳಾಗಿರುವದರಿಂದ, ಮತ್ತು "ಮನುಷ್ಯಪುತ್ರಿಯರನ್ನು" ಮದುವೆ ಮಾಡಿಕೊಂಡ "ದೇವಪುತ್ರರು" ಪ್ರಳಯದಲ್ಲಿ (ಅವರ ಸಂತಾನದವರ ಸಮೇತವಾಗಿ) ಮರಣಿಸಿದರಾದ್ದರಿಂದ, ಈ "ಪುತ್ರರು" ದೇವದೂತರಾಗಿರಲಿಕ್ಕಿಲ್ಲ.

ಪ್ರಳಯವು ಪಾಪದ ಕಾರಣದಿಂದಾಗಿ ಲೋಕದ ಮೇಲೆ ಬರಮಾಡಲ್ಪಟ್ಟ ದೇವರ ನ್ಯಾಯತೀರ್ಪು ಆಗಿತ್ತು. ಇದು ದೇವದೂತರ ಪಾಪ ಆಗಿರಲಿಲ್ಲ, ಆದರೆ 6:4, 5ರಲ್ಲಿ "ಹೆಸರುಗೊಂಡ ಪರಾಕ್ರಮಶಾಲಿಗಳ" "ಕೆಟ್ಟತನ"ವೇ ಆಗಿತ್ತು. ಪ್ರಳಯದಲ್ಲಿನ ದೇವರ ರೌದ್ರವು ದೇವದೂತರು ಅಥವಾ ಅರೆ-ದೇವದೂತರಂತಹ ಅವರ ಮಕ್ಕಳ ವಿರುದ್ಧವಾಗಿರಲಿಲ್ಲ. ಆತನು ಭೂಮಿಯ ಮೇಲಿನಿಂದ "ಮನುಷ್ಯಜಾತಿಯನ್ನು ಅಳಿಸಿಬಿಡುವೆನು" ಎಂದಷ್ಟೇ ದೃಢನಿಶ್ಚಯ ಮಾಡಿಕೊಂಡಿದ್ದನು (6:7) ಯಾಕೆಂದರೆ ಅವರು ಅಪರಾಧಿಗಳಾಗಿದ್ದರು. ಆದಿಕಾಂಡ ವಾಕ್ಯ ಮತ್ತು ಯೇಸುವಿನ ಉಪದೇಶವು ದೈವಿಕ ಹಾಗೂ ಮಾನವ ಜೀವಿಗಳ ನಡುವೆ ವಿವಾಹ ಸಂಬಂಧಗಳಿರುವದಿಲ್ಲ ಎಂದು ತಿಳಿಸುತ್ತದೆ ಮತ್ತು ಅರೆ-ಜಾತಿಯ ಸಂತಾನದವರು ಪ್ರಳಯಕ್ಕೆ ಪ್ರಮುಖ ಕಾರಣವೆಂಬುದನ್ನು ಅಲ್ಲಗಳೆಯುತ್ತದೆ.

"ದೇವಪುತ್ರರು" ಎಂಬುದರ ಎರಡನೆಯ ಅರ್ಥನಿರೂಪಣೆ ಯಾವದೆಂದರೆ ಅವರು "ಪರಾಕ್ರಮಿಗಳು" ಆಗಿದ್ದ ಮನುಷ್ಯರು ಅಥವಾ ಬಹುಶಃ "ಪ್ರಭುಗಳು" ಆಗಿರಬಹುದು,[4] ಇವರು "ಮನುಷ್ಯಪುತ್ರಿಯರ ಸೌಂದರ್ಯವನ್ನು" ನೋಡಿದರು ಮತ್ತು ಅವರು "ತಮಗೆ ಇಷ್ಟರಾದವರನ್ನು ಹೆಂಡರನ್ನಾಗಿ ಮಾಡಿಕೊಂಡರು." ರಬ್ಬಾನಿಕ್ ಪಂಡಿತರು ಮೊದಲನೆಯ ಅಭಿಪ್ರಾಯದ ಉಹಾಪೋಹಕ್ಕಿಂತಲೂ ಈ ಅರ್ಥನಿರೂಪಣೆಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ದೈವಿಕ ಜೀವಿಗಳು ಭೂಮಿಗೆ ಇಳಿದು ಬಂದು ಮಾನವ ಸ್ತ್ರೀಯರೊಂದಿಗೆ ಲೈಂಗಿಕ ಸಂಬಂಧಗಳನ್ನಿಟ್ಟುಕೊಳ್ಳುವುದು ಅತ್ಯಂಥ ಅನ್ಯಧರ್ಮೀಯವಾಗಿದ್ದು ಪ್ರಾಚೀನ ರಬ್ಬಿಗಳು ಅದನ್ನು ಪರಿಗಣನೆಗೆ ತೆಗೆದುಕೊಂಡಿರಲಿಲ್ಲ.

ಪ್ರಾಚೀನ ಜಗತ್ತಿನಲ್ಲಿ ಸರ್ವೋಚ್ಚ ನ್ಯಾಯದೀಶರಾಗಿದ್ದ ಪ್ರಭುಗಳು, ಕೀರ್ತನೆ 82ರಲ್ಲಿ ರೂಪಕೋಕ್ತಿಯ ಅರ್ಥದಲ್ಲಿ "ದೇವರುಗಳು" ಎಂದು ಕರೆಯಲ್ಪಟ್ಟಿರುತ್ತಾರೆ. ಅವರ ನಾಗರಿಕರು ನ್ಯಾಯಕ್ಕಾಗಿ ಮನವಿ ಸಲ್ಲಿಸಬಹುದಾದ ಅತ್ಯುನ್ನತ ನ್ಯಾಯಾಲಯವಾಗಿ ಮಹಾ ಅಧಿಕಾರವನ್ನು ಹೊಂದಿದ್ದರು. ಅವರನ್ನು "ಪರಾತ್ಪರನ ಮಕ್ಕಳು" (ಕೀರ್ತನೆ 82:6)[5] ಎಂದು ಕರೆಯಬಹುದು, ಆದರೆ ಅರು ಖಂಡಿತವಾಗಿಯೂ ದೇವರುಗಳಲ್ಲ ಅಥವಾ ದೈವಿಕ

ಜೀವಿಗಳಲ್ಲ.[6] ಆದಿಕಾಂಡದಲ್ಲಿನ ವಾಕ್ಯದಲ್ಲಿರುವ ಯಾವದೂ ಸಹ ತಮ್ಮನ್ನು ಮದುವೆಯಾಗುವಂತೆ ಅಥವಾ ತಮ್ಮ ಹೆಂಗಸರ ತಂಡಕ್ಕೆ ಸೇರ್ಪಡೆಗೊಳ್ಳುವಂತೆ "ಮನುಷ್ಯಪುತ್ರಿಯರನ್ನು" ಒತ್ತಾಯಿಸಿದಂಥ "ದೇವಪುತ್ರರು" (ದೇವರುಗಳು ಅಥವಾ ದೇವದೂತರಂತಹ ಜೀವಿಗಳು) ಎಂಬುದಾಗಿ ಪ್ರಭುಗಳನ್ನು ಸೂಚಿಸುವದಿಲ್ಲ. ಕೀರ್ತನೆ 82ನ್ನು ಆದಿಕಾಂಡ 6:2ರಲ್ಲಿ ಪ್ರಳಯಪೂರ್ವದ ಸನ್ನಿವೇಶದಲ್ಲಿ ಓದುವುದು ಒಂದು ಅತ್ಯಂಥ ಸೃಜನಾತ್ಮಕ ಅರ್ಥನಿರೂಪಣೆಯಂತಾಗುವುದು.

"ದೇವಪುತ್ರರು" ಎಂಬುದರ ಮೂರನೆಯ ಮತ್ತು ಅತ್ಯಂಥ ಸಂಭಾವ್ಯವಾದ ಅರ್ಥನಿರೂಪಣೆಯೆಂದರೆ ಅವರು 5ನೇ ಅಧ್ಯಾಯದಲ್ಲಿರುವ ವಂಶಾವಳಿಯಲ್ಲಿ ಸೇರ್ಪಡೆಗೊಳಿಸಲ್ಪಟ್ಟಿರುವ ಸೇತನ ಸಂತತಿಯವರಾಗಿದ್ದರು ಎಂಬುದೆ. ಈ ಜನರು ನೀತಿವಂತರು ಮತ್ತು ದೇವ-ಭಯವಿರುವವರು ಆಗಿರಬಹುದಾಗಿದೆ, ಯಾಕೆಂದರೆ ಅವರು ಹನೋಕ ವಂಶದಿಂದ ಬಂದವರಾಗಿದ್ದರು, ಆತನ ಮೂಲಕವೇ ಮನುಷ್ಯರು "ಕಾಲದಲ್ಲಿ ಯೆಹೋವ ಎಂಬ ಹೆಸರನ್ನು ಹೇಳಿಕೊಂಡು ಆರಾಧಿಸುವದಕ್ಕೆ" ಆರಂಭಿಸಿದ್ದರು (4:26). ಅವರು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುವದಕ್ಕೆ ಒಂದು ನಂಬಿಗಸ್ತಿಕೆಯ ಮಾದರಿಯನ್ನು ತೋರಿಸಿ ಕೊಟ್ಟಂಥ ಹನೋಕನ ವಂಶದವರು ಸಹ ಆಗಿದ್ದರು (5:24).

ಹಳೆಯ ಮತ್ತು ಹೊಸ ಒಡಂಬಡಿಕೆಗಳೆರಡರಲ್ಲಿಯೂ, ದೇವರ ಜನರು "ದೇವಪುತ್ರರು" ಎಂದು ಕರೆಯಲ್ಪಟ್ಟಿರುತ್ತಾರೆ. ಇದು ಆದಾಮನ ವಿಷಯದಲ್ಲಿ (ಲೂಕ 3:38), ಇಸ್ರಾಯೇಲ್ಯರ ವಿಷಯದಲ್ಲಿ (ವಿಮೋಚನಕಾಂಡ 4:22, 23; ಯೆಶಾಯ 1:2, 4; ಯೆರೆಮೀಯ 3:14, 22; ಹೋಶೇಯ 11:1), ಮತ್ತು ಕ್ರೈಸ್ತರ ವಿಷಯದಲ್ಲಿ (ಗಲಾತ್ಯ 3:26; 4:5) ಸತ್ಯವಾಗಿರುತ್ತದೆ. ನಿಷೇಧಿಸಲ್ಪಟ್ಟಿದ್ದ ಹಣ್ಣು "ಒಳ್ಳೇದು" ಎಂಬಂತೆ ("ರಮ್ಯವಾಗಿ" ಅಥವಾ "ಅಪೇಕ್ಷಿಸತಕ್ಕದ್ದಾಗಿ" [טוֹב, *ಟೊಬ*; 3:6]) ಕಂಡದ್ದರಿಂದ ಪಾಪ ಮಾಡಿದ "ದೇವಪುತ್ರ"ನಾದ ಆದಾಮನಂತೆಯೇ, ಆತನ ಸಂತಾನದವರಲ್ಲಿ ಅನೇಕರು ಅಂಥ ಶೋಧನೆಗಳಿಗೆ ಒಳಗಾದರು. "ಸೇತನ" ಮೂಲಕವಾಗಿ ಹುಟ್ಟಿದ್ದ "ದೇವಪುತ್ರರು" ಘೋರವಾಗಿ ಪಾಪ ಮಾಡಿದ್ದರು ಯಾಕೆಂದರೆ ಅವರು "ಮನುಷ್ಯಪುತ್ರಿಯರ" ಕಡೆಗೆ ಆಕರ್ಷಿತರಾಗಿದ್ದರು. "ಪುತ್ರಿಯರು" ಬಹುಶಃ ಕಾಯಿನನ ಸಂತಾನದವರಾಗಿರಬಹುದು. "ದೇವಪುತ್ರರು" ಅವರನ್ನು "ಸೌಂದರ್ಯ"ವಾದರೆಂದು (*ಟೊಬ*; "ಉತ್ತಮವಾಗಿಯೂ" ಅಥವಾ "ಅಪೇಕ್ಷಿಸತಕ್ಕದ್ದಾಗಿಯೂ") ಕಂಡರು ಮತ್ತು ತಮಗೆ ಹೆಂಡತಿಯರಾಗಿರುವದಕ್ಕೆ ಬಯಸಿದಷ್ಟು ಹೆಂಗಸರನ್ನು ತಮಗೆ ತೆಗೆದುಕೊಂಡರು.

ಸಮಸ್ಯೆಯು ಈ ಸ್ತ್ರಿಯರು ಸೌಂದರ್ಯವತಿಯರಾಗಿದ್ದರು ಎಂಬುದಾಗಿರಲಿಲ್ಲ, ಆದರೆ ಸೌಂದರ್ಯವು ಅವರ ಏಕೈಕ ಆಕರ್ಷಣೆ ಆಗಿತ್ತೆಂಬುದೇ ಸಮಸ್ಯೆಯಾಗಿರುತ್ತದೆ. ಅವರಲ್ಲಿ ಯಾವದೇ ಆತ್ಮೀಕ ಆಳವು ಇರಲಿಲ್ಲ, ನಾವು ಯೆಶಾಯ 3:16–4:1 ಮತ್ತು ಆಮೋಸ 4:1–3ರಲ್ಲಿ ಓದುವಂಥ ಕೇವಲ "ಲೌಕಿಕ ಮನಸ್ಸಿನವರು ಅಥವಾ ಭೌತಿಕ-ಮನಃಸ್ಥಿತಿಯ ಮಹಿಳೆಯರು" ಆಗಿದ್ದರು.[7] ಅದೇ ರೀತಿಯಲ್ಲಿಯೇ, "ದೇವಪುತ್ರರು" ತಪ್ಪಾದ ಕಾರಣಗಳ ನಿಮಿತ್ತ ಮದುವೆ ಮಾಡಿಕೊಳ್ಳುವ ಪುರುಷರಿಗೆ ಆರಂಭಿಕ ಉದಾಹರಣೆಗಳಾಗಿದ್ದರು ಎಂಬುದು ಸ್ಪಷ್ಟವಾಗಿರುತ್ತದೆ. ಅವರಿಗೆ ಆತ್ಮೀಕತೆಯ ಬಗ್ಗೆಯಾಗಲಿ ಅಥವಾ ಒಬ್ಬ ಹೆಂಡತಿಯಲ್ಲಿ ಗುಣವಂತಿಕೆಯಾಗಲಿ ಇರುವದರ ಬಗ್ಗೆ ಚಿಂತೆಯಿರಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಅವರ ಅಹಂಭಾವದ ಗರ್ವದಿಂದಾಗಿ, ಅವರ ಮನಸ್ಸುಗಳಲ್ಲಿ ತಾವು ಸೌಂದರ್ಯವತಿಯರಾದ ಸ್ತ್ರೀಯರನ್ನು ಹೆಂಡತಿಯರನ್ನಾಗಿ ಮಾಡಿಕೊಳ್ಳುವದರಿಂದ ತಮಗೆ ಸಿಕ್ಕಬಹುದಾದ ಸ್ತ್ರೀಯರ ಬಾಹ್ಯ ಸೌಂದರ್ಯ ಮತ್ತು ಅಂತಸ್ತು, ಅಧಿಕಾರ, ಮತ್ತು ಖ್ಯಾತಿ ಇವುಗಳೇ ಮುಖ್ಯವಾಗಿದ್ದವು

(ನೋಡಿರಿ 6:4). ಇದೆಲ್ಲವೂ ಅವರನ್ನು ಮದುವೆಯಲ್ಲಿ ದೇವರು ಮೂಲ ಯೋಜನೆಯಲ್ಲಿ ಹೊಂದಿದ್ದ ಏಕಪತ್ನಿತ್ವವನ್ನು ತೊರೆದು ಬಿಟ್ಟು ಲೆಮೆಕನ ಇಬ್ಬರು ಹೆಂಡತಿಯರ ಉದಾಹರಣೆಯನ್ನು ದಾಟಿ ಹೋಗುವಂತೆ, ಆ ಮೂಲಕ "ತಮಗೆ ಇಷ್ಟರಾದವರನ್ನು ಹೆಂಡರನ್ನಾಗಿ ಮಾಡಿಕೊಂಡರು."

**ವಚನ 3.** ಈ ವಚನವು ಸಹ ಹಲವಾರು ಸವಾಲುಗಳನ್ನು ಮುಂದಿಡುತ್ತದೆ, ಯಾಕೆಂದರೆ ವಿವಿಧ ಪರಿಹಾರಗಳು ಸೂಚಿಸಲ್ಪಟ್ಟಿರುತ್ತವೆ. ಹೇಗೂ, ಈ ಅಧ್ಯಯನದ ವ್ಯಾಪ್ತಿಯು ಕೆಲವೊಂದು ವ್ಯಾಖ್ಯೆಗಳಿಗೆ ಮಾತ್ರವೇ ಅನುಮತಿಯನ್ನು ಒದಗಿಸುತ್ತದೆ.

ವಚನವು **ನನ್ನ ಆತ್ಮವು ಮನುಷ್ಯರಲ್ಲಿ ಶಾಶ್ವತವಾಗಿರುವದಿಲ್ಲ; ಅವರು ಭ್ರಷ್ಟರಾದದರಿಂದ ಮರ್ತ್ಯರೇ** ಎಂಬುದಾಗಿ ದೇವರು ಹೇಳುವದರೊಂದಿಗೆ ಆರಂಭಗೊಳ್ಳುತ್ತದೆ. "ನನ್ನ ಆತ್ಮವು" ಎಂಬುದರ ಅರ್ಥವೇನು? NASB[8]ಯಲ್ಲಿ "ಆತ್ಮ" (רוּחִ, *ರೂವಾಚ)* ಎಂಬುದು ದೊಡ್ಡಕ್ಷರದಿಂದ ಆರಂಭಗೊಳ್ಳುವುದು ಸೂಚಿಸುವದೇನೆಂದರೆ ಅದು 1:2ರಲ್ಲಿರುವಂತೆ ದೇವರ ವೈಯಕ್ತಿಕ ಪ್ರಸನ್ನತೆ ಎಂದರ್ಥವಾಗಿರುತ್ತದೆ, ಅಲ್ಲಿ "ದೇವರಾತ್ಮ"ನು ಜಲಮೂಹಗಳ ಮೇಲೆ ಚಲಿಸುತ್ತಿದ್ದನು. "ಆತ್ಮ" ಎಂಬ ಪದವನ್ನು ಬಳಸುವದರ ಬದಲಾಗಿ, CEVಯಲ್ಲಿ "ನನ್ನ ಜೀವದಾಯಕ ಶ್ವಾಸವು" ಎಂದಿರುತ್ತದೆ. ಮನುಷ್ಯನಿರಲಿ ಅಥವಾ ಪ್ರಾಣಿಗಳಾಗಿರಲಿ, ಎಲ್ಲಾ ಜೀವಕ್ಕೂ ಈ ದೈವಿಕ ಶ್ವಾಸವು ಅತ್ಯಾವಶ್ಯಕವಾಗಿರುತ್ತದೆ. *ರೂವಾಚ* ಎಂಬ ಪದವು ಪುನಃ 6:17 ಮತ್ತು 7:15ರಲ್ಲಿ ಕಾಣಿಸಿಕೊಳ್ಳುವದಾಗಿದ್ದು, ಅಲ್ಲಿ NASBಯು "ಜೀವಶ್ವಾಸ" ಎಂದು ಬಳಸಿರುತ್ತದೆ. ಈ ಎಲ್ಲಾ ಮೂರು ವಾಕ್ಯಭಾಗಗಳು ಪ್ರಳಯದ ಸುತ್ತಲಿನ ಘಟನೆಗಳ ಕುರಿತಾದ ಸನ್ನಿವೇಶಗಳಲ್ಲಿ ಇರುತ್ತವೆ. ಆದದರಿಂದ, "ಆತ್ಮ"ವನ್ನು ತೆಗೆದು ಬಿಡುವದೆಂದರೆ ಅದು ಆತನ ಜೀವದಾಯಕ ಶ್ವಾಸವನ್ನು, ಅಥವಾ ಆತ್ಮವನ್ನು ತೆಗೆದು ಬಿಡುವದಕ್ಕೆ ಸಮವಾಗಿರುತ್ತದೆ. ನಾವೆಯಲ್ಲಿದ್ದವರನ್ನು ಹೊರತು ಪಡಿಸಿ, ಲೋಕದಲ್ಲಿ ಸಕಲ ಮನುಷ್ಯ ಮತ್ತು ಪ್ರಾಣಿಗಳಿಂದ ಜೀವವನ್ನು ತೆಗೆದು ಹಾಕಲಾಗಿತ್ತು.

ಇನ್ನೊಂದು ಸಮಸ್ಯೆಯು יָדוֹן *(ಯಾದೊನ)* ಎಂಬ ಪದವನ್ನು "ವಾದಿಸುವದಿಲ್ಲ" ಎಂದು ಅನುವಾದಿಸಿರುವದೇ ಆಗಿದೆ. ಈ ಪದವು ಹಳೆಯ ಒಡಂಬಡಿಕೆಯಲ್ಲಿ ಒಂದೇ ಒಂದು ಸಾರಿ ಕಾಣಿಸಿಕೊಳ್ಳುತ್ತದೆ ಮತ್ತು ಅಸ್ಪಷ್ಟವಾದ ವ್ಯುತ್ಪತ್ತಿಶಾಸ್ತ್ರವನ್ನು ಹೊಂದಿದೆ. NIVಯು ಅದೇ ರೀತಿಯ ಅರ್ಥವನ್ನು ಕೊಡುತ್ತದೆ, "ಹೋರಾಡುವದಿಲ್ಲ." "ವಾದಿಸುವುದು" ಅಥವಾ "ಹೋರಾಡುವುದು" ಎಂಬ ವಿಚಾರವು ಸೂಚಿಸುವದೇನೆಂದರೆ, ದೇವರು ಮನುಷ್ಯನೊಂದಿಗೆ ನಿರಂತರವಾಗಿ ಹೋರಾಟದಲ್ಲಿದ್ದನು, ದಂಡಿಸುವದಾಗಿ ಬೆದರಿಕೆಯೊಡ್ಡುತ್ತಾ ಮತ್ತು ಪಾಪವನ್ನು ಬಿಟ್ಟು ಬಿಡುವಂತೆ ಅವನಲ್ಲಿ ಮನವರಿಕೆಯನ್ನುಂಟು ಮಾಡಿ ತನ್ನ ಸೃಷ್ಟಿಕರ್ತನ ಕಡೆಗೆ ಹಿಂದಿರುಗುವಂತೆ ಮಾಡುವದಕ್ಕೆ ಪ್ರಯತ್ನಿಸುವವನಾಗಿದ್ದನು. ಕಾಯಿನ ಮತ್ತು ಆತನ ಸಂತಾನದವರೊಂದಿಗೆ ಸಹ ಹೀಗೆಯೇ ಮಾಡಿದ್ದನು (4:1-24).

*ಯಾದೊನ* ಕುರಿತಾದ ಈ ಅರ್ಥನಿರೂಪಣೆಯು ಸಾಧ್ಯವಿರುತ್ತಾದಾದರೂ, "ನೆಲೆಯಾಗಿರುವದಿಲ್ಲ" ಎಂಬುದು ಈ ಇಬ್ರಿಯ ಪದಕ್ಕೆ ಒಂದು ಪರ್ಯಾಯ ಅನುವಾದವಾಗಿ ಕೊಡಲ್ಪಟ್ಟಿದೆ.[10] ಅದರ ಜೊತೆಗೆ, ದೇವರು "ಮನುಷ್ಯ" (אָדָם, *ಆದಾಮ*) ಎಂದು ಪ್ರಸ್ತಾಪಿಸಿದ ವೇಳೆ, ಆತನು ಇಲ್ಲಿ ಮುಂದಿನ ಅಸಂಖ್ಯಾತ ತಲೆಮಾರುಗಳ ವ್ಯಕ್ತಿಗಳನ್ನು ಸೂಚಿಸುತ್ತಿಲ್ಲ. ಆತನು ಆ ಕಾಲದಲ್ಲಿ ಬದುಕಿದ್ದ ಸಕಲ ಮಾನವರನ್ನು (ಸ್ತ್ರೀಯರು ಸೇರಿದಂತೆ) ಸೂಚಿಸಿ ಹೇಳುತ್ತಿದ್ದಾನೆ.

ದೇವರ ಜೀವದಾಯಕ ಆತ್ಮವು ಮಾನವರಲ್ಲಿ "ಶಾಶ್ವತವಾಗಿರುವದಿಲ್ಲ" ಎಂಬುದಕ್ಕೆ

ಕಾರಣವೇನೆಂದರೆ ಅವರು "ಶರೀರಧಾರಿಗಳು" ಆಗಿರುತ್ತಾರೆಂಬುದೆ. "ಶರೀರಧಾರಿಗಳು" ಎಂಬುದಕ್ಕಿರುವ ಇಬ್ರಿಯ ಪದವು בְּשָׂר *(ಬಾಸಾರ),* ಇದಕ್ಕೆ ಹಲವಾರು ಬೇರೆ ಬೇರೆ ಅರ್ಥಗಳಿರುತ್ತವೆ ಮತ್ತು ಸನ್ನಿವೇಶಕ್ಕನುಗುಣವಾಗಿ ಅರ್ಥಮಾಡಿಕೊಳ್ಳತಕ್ಕದ್ದು.[11] NIVಯು ಇಲ್ಲಿ ಪದವನ್ನು "ಮರ್ತ್ಯರು" ಎಂದು ಅನುವಾದಿಸಿರುತ್ತದೆ, ಆದರೆ ಈ ಅನುವಾದವು ಸ್ವಲ್ಪ ಅರ್ಥಪೂರ್ಣವಾಗಿದೆ. ದೇವರ ಆತ್ಮವು ಮನುಷ್ಯನಲ್ಲಿ ಇನ್ನು ಮೇಲೆ ನೆಲೆಗೊಳ್ಳದಿರುವದಕ್ಕೆ ಮನುಷ್ಯನ ಮರ್ತ್ಯತ್ವವು ಹೇಗೆ ಕಾರಣವಾಗಿರಬಲ್ಲದು? ದೇವರು ಮನುಷ್ಯನನ್ನು ಮರ್ತ್ಯನನ್ನಾಗಿ ನಿರ್ಮಿಸಿದನು. ಮನುಷ್ಯನಿಗೆ ಜೀವವೃಕ್ಷದ ಮಾರ್ಗವು ಮುಚ್ಚಿ ಹೋದ ನಂತರ ಅವನ ಮರ್ತ್ಯನಾಗಲಿಲ್ಲ. ಬದಲಾಗಿ, ಆತನು ಮುಂಚೆಯೇ ಮರ್ತ್ಯನಾಗಿದ್ದನು, ಮತ್ತು ಆತನು ಬದುಕುಳಿಯುವದಕ್ಕೆ ಜೀವವೃಕ್ಷದ ಹಣ್ಣನ್ನು ತಿನ್ನುವುದು ಅವಶ್ಯಕವಾಗಿತ್ತು. ಮನುಷ್ಯನು ಏದೆನ್ ತೋಟದಿಂದ ಹೊರಕ್ಕೆ ಹಾಕಲ್ಪಟ್ಟ ಮೇಲೆ ಸಾಯುವಂತೆ ಮಾಡಿದ್ದು ಮರ್ತ್ಯತೆಯಾಗಿರಲಿಲ್ಲ; ಅದಕ್ಕೆ ಕಾರಣವು ಪಾಪವೇ ಆಗಿತ್ತು. ಪ್ರಳಯದ ನೆರಳಿನಲ್ಲಿದ್ದಂಥ ಮನುಷ್ಯರ ವಿಷಯದಲ್ಲಿಯೂ ಇದು ಸತ್ಯವಾಗಿತ್ತು. ದೇವರ ಜೀವದಾಯಕ ಆತ್ಮವು ಹೊರಟು ಹೋಗಿ ಮಹಾಪ್ರವಾಹ ಉಂಟಾಗುವಂತೆ ಮಾಡಿದ್ದು ಮರ್ತ್ಯತೆ ಆಗಿರಲಿಲ್ಲ. ಬದಲಾಗಿ, ಮಾನವರು ನೈತಿಕವಾಗಿ ಮತ್ತು ಆತ್ಮೀಕವಾಗಿ ಬಲಹೀನವಾಗಿದ್ದರಿಂದ, "ದುರ್ಬ" ಮತ್ತು "ದೋಷದಿಂದ" ಕೂಡಿದ್ದರಿಂದ[12] ಮತ್ತು ಪಾಪದ ಕಡೆಗೆ ಒಲವು ಹೊಂದಿದ್ದರಿಂದ ಅದು ಸಂಭವಿಸಿತ್ತು. ಈ ಸನ್ನಿವೇಶದಲ್ಲಿ *ಬಾಸಾರ*ನ ಅರ್ಥವು ಇದೇ ಆಗಿರುವಂತೆ ಕಾಣಿಸುತ್ತದೆ.[13]

3ನೇ ವಚನದ ಮಿಕ್ಕ ಭಾಗವು ಹೀಗೆ ದೃಢಪಡಿಸುತ್ತದೆ, **ಅವರ ಆಯುಷ್ಯವು ನೂರ ಇಪ್ಪತ್ತು ವರುಷವಾಗಿರಲಿ**. ಮನುಷ್ಯನು ಪಾಪ ಮತ್ತು ಕೆಟ್ಟತನದ ಕಡೆಗೆ ಒಲವು ಹೊಂದಿದ್ದರಿಂದಾಗಿ ದೇವರು ಅವನ ಆಯುಷ್ಯನ್ನು ಕಡಿಮೆಗೊಳಿಸಿದನು ಎಂದು ಕೆಲವರು ವಾದಿಸುತ್ತಾರೆ. 5ನೇ ಅಧ್ಯಾಯದಲ್ಲಿ ಪ್ರಳಯಪೂರ್ವದ ಜನರ ಬಗ್ಗೆ ಬರೆದಿರುವ ಪ್ರಕಾರವಾಗಿ, ದೇವರು ಮನುಷ್ಯನ ಆಯುಷ್ಯನ್ನು 900 ವರ್ಷಗಳಿಗೆ ಬದಲಾಗಿ, ತಾನು ಅದನ್ನು 120 ವರ್ಷಗಳಿಗೆ ಸೀಮಿತಗೊಳಿಸುವೆನೆಂದು ಪ್ರಳಯದ ನಂತರ ತೀರ್ಮಾನಿಸಿಕೊಂಡನೋ? ಈ ಅಭಿಪ್ರಾಯವು ಲೋಕವು ನಾಶಗೊಳ್ಳುವಂಥ ತಕ್ಷಣದ ಸನ್ನಿವೇಶದಲ್ಲಿ ಸಂಭವನೀಯವೆಂದು ಅನ್ನಿಸುತ್ತದೆ. ಜನರ ಪ್ರತಿಯೊಂದು ಯೋಚನೆ ಮತ್ತು ಕ್ರಿಯೆಯು ನಿರಂತರವಾಗಿ ಕೆಟ್ಟದ್ದೇ ಆಗಿರುವಾಗ ಅವರು ಅಷ್ಟೊಂದು ದೀರ್ಘಕಾಲ ಬಾಳುವದನ್ನು ಬಹುಶಃ ದೇವರು ಸಹಿಸಿಕೊಳ್ಳದವನಾಗಿರಬಹುದು (6:5).

ಎರಡನೆಯ ಯೋಚನೆಯು ಏನೆಂದರೆ 120 ವರ್ಷಗಳು ಕೃಪೆಯ ಒಂದು ಕಾಲಾವದಿಯಾಗಿದ್ದು, ಆ ಕಾಲಾವದಿಯಲ್ಲಿ "ಸುನೀತಿಯನ್ನು ಸಾರುವವನಾಗಿದ್ದ" ನೋಹನಿಗೆ (2 ಪೇತ್ರ 2:5) ಮಾನವರಲ್ಲಿ ಪಶ್ಚಾತ್ತಾಪವನ್ನುಂಟು ಮಡುವ ದೃಷ್ಟಿಯೊಂದಿಗೆ (ನೋಡಿರಿ 1 ಪೇತ್ರ 3:19 20) ಬರಲಿರುವ ನ್ಯಾಯತೀರ್ಪಿನ ವಿಷಯವಾಗಿ ಮಾನವರಿಗೆ ಎಚ್ಚರಿಸಲು ಸಮಯವು ಸಿಕ್ಕುವದಾಗಿತ್ತು. ಒಂದು ಆರಂಭಿಕ ಯೆಹೂದಿ ಕೃತಿಯು ಈ ಹೇಳಿಕೆಯನ್ನು ಒಂದು ಪರೀಕ್ಷಣಾವಧಿ ಎಂದು ಅರ್ಥನಿರೂಪಣೆ ಮಾಡಿರುತ್ತದೆ: "ಅವರು ಪರಿವರ್ತನೆಗೊಳ್ಳಬಹುದೆನೋ ಎಂಬುದಕ್ಕಾಗಿ, ನಾನು ಅವರಿಗೆ ಕೊಡಲಿರುವ ಸಮಯಾವಧಿ [ಅಥವಾ ಅವಧಿ] ನೂರ ಇಪ್ಪತ್ತು ವರ್ಷಗಳು."[14]

ಈ ಕಡೆಯ ಅಭಿಪ್ರಾಯವು ನೆಲೆ ನಿಲ್ಲುವದು ಹೆಚ್ಚು ಸುಲಭವಾಗಿರುತ್ತದೆ ಯಾಕೆಂದರೆ ಇದು ಪ್ರಳಯದ ನಂತರದಲ್ಲಿನ ವ್ಯಕ್ತಿಗಳ ಆಯುಷ್ಕಾಲಗಳ ವಿಶಾಲವಾದ ಸನ್ನಿವೇಶಕ್ಕೆ ಉತ್ತಮವಾಗಿ ಸರಿಹೊಂದುತ್ತದೆ. ಕೆಲವರು 120 ವರ್ಷದ ಮಿತಿಗಿಂತಲೂ ಅಧಿಕ ವರ್ಷಗಳ

ಕಾಲ ಬದುಕುವದನ್ನು ಮುಂದುವರೆಸಿದರು. ಉದಾಹರಣೆಗೆ, ಭೂಮಿಯ ಮೇಲೆ ಪ್ರಳಯವು ಬಂದ ವೇಳೆ ನೋಹನು 600 ವರ್ಷದವನಾಗಿದ್ದನು (7:6), ಮತ್ತು ಆತನು 950 ವರ್ಷಗಳಾಗುವ ತನಕ ಬದುಕಿದ್ದನು (9:29). ಅಬ್ರಹಾಮನು 175 ವರ್ಷಗಳ ಕಾಲ ಬದುಕಿದನು (25:7), ಇಸಾಕನು 180 ವಯಸ್ಸಿನ ತನಕ ಜೀವಿಸಿದನು (35:28), ಮತ್ತು ಯಾಕೋಬನು 147 ವರ್ಷ ಬದುಕಿದನು (47:28). ಯೋಸೇಫನು 110 ವರ್ಷಗಳ ಕಾಲ ಜೀವಿಸಿದನು (50:26), ಮೋಶೆಯು 120 ವಯಸ್ಸಿನಲ್ಲಿ ಮರಣಿಸುವ ವೇಳೆ ಇನ್ನೂ ಬಲದಿಂದ ಕೂಡಿದ್ದನು (ಧರ್ಮೋಪದೇಶಕಾಂಡ 34:7), ಯೆಹೋಶುವನು 110 ವಯಸ್ಸಿನ ವರೆಗೂ ಬದುಕಿದದನು (ಯೆಹೋಶುವ 24:29). ಕಡೆಯ ಗುಂಪಿನಲ್ಲಿ, ಆರೋನನು ಮಾತ್ರವೇ 120 ವರ್ಷಗಳನ್ನು ದಾಟಿ (ಅರಣ್ಯಕಾಂಡ 33:39) 123 ವರ್ಷದಲ್ಲಿ ಮರಣಿಸಿದನು. ಖಂಡಿತವಾಗಿಯೂ, ನೋಹನ ನಂತರದಲ್ಲಿ 120 ವರ್ಷಗಳು ಸಾಮಾನ್ಯವಾದ ಆಯುಷ್ಕಾಲ ಆಗಿ ಮಾರ್ಪಡಲಿತ್ತು ಎಂಬುದನ್ನು ಸೂಚಿಸಬಹುದಾಗಿದೆ, ಆದರೆ ಅದು ಕೆಲವರನ್ನು ಈ ನಿಯಮಕ್ಕೆ ಹೊರತು ಪಡಿಸುವದಾಗಿ, ಕ್ರಮೇಣದಲ್ಲಿ ಮಾತ್ರವೇ ಜಾರಿಗೆ ತರಲ್ಪಡಲಿತ್ತು.[15] ಇನ್ನೊಂದಡೆಯಲ್ಲಿ, ಹಲವಾರು ಕಾರಣಾಂಶಗಳು ಈ ಕಾಲಾವಧಿಯನ್ನು ಭೂಮಿಯ ಮೇಲೆ ಪ್ರಳಯವನ್ನು ತೆರೆದು ಬಿಡುವದಕ್ಕೆ ಮುನ್ನ ಪಶ್ಚಾತ್ತಾಪ ಪಡುವಂತೆ ಮನುಷ್ಯರಿಗೆ ದೇವರು ಕೊಡುವ ಸಮಯದ ಮೊತ್ತವೆಂಬುದಾಗಿ ತೋರಿಸಿ ಕೊಡುತ್ತವೆ. ಈ ಕಾಲದಲ್ಲಿನ ಒಂದು ಭಾಗದ ವೇಳೆ, ನೋಹನ ಬೋಧನೆಯ ಮೂಲಕವಾಗಿ ದೇವರು ಜನರನ್ನು ಪಶ್ಚಾತ್ತಾಪ ಪಡುವಂತೆ ಕರೆಯುವವನಾಗಿದ್ದನು. ಅಷ್ಟುಮಾತ್ರವಲ್ಲದೆ, ಇದರಲ್ಲಿ ಸ್ವಲ್ಪ ಸಮಯವು ನಾವೆಯನ್ನು ಕಟ್ಟುವದಕ್ಕಾಗಿ ನೋಹನ ಕುಟುಂಬಕ್ಕೆ ಅಗತ್ಯವಿತ್ತು, ಅದೊಂದು ಸಾಕಷ್ಟು ಪ್ರಮಾಣದ ಸಮಯವೇ ಆಗಿತ್ತು (7:6, 7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನ 4.** ಆ ಕಾಲದಲ್ಲಿ **ಭೂಮಿಯ ಮೇಲಿದ್ದ ನೆಫೀಲಿಯರು** ಅರ್ಥನಿರೂಪಣೆಗೆ ಮತ್ತೊಂದು ಸಮಸ್ಯೆಯನ್ನು ತಂದೊಡ್ಡುತ್ತಾರೆ. KJVಯು ಈ נְפִלִים *(ನೆಪಿಲಿಮ್)* ಎಂಬ ಇಬ್ರಿಯ ಪದವನ್ನು "ಮಹಾಶರೀರಿಗಳು" ಎಂದು ಅನುವಾದಿಸುತ್ತದೆ. ಇದು LXX ತರ್ಜುಮೆಯ ಮೇಲೆ ಆಧಾರವಾಗಿರುತ್ತದೆ, ಅದು ಈ ಸ್ಥಳದಲ್ಲಿ ಮತ್ತು *ನೆಪಿಲಿಮ್* ಎಂಬ ಪದವು ಕಂಡು ಬರುವ ಇನ್ನೊಂದು ಏಕೈಕ ಸ್ಥಳವಾದ ಅರಣ್ಯಕಾಂಡ 13:33ರಲ್ಲಿ ಸಹ γίγαντες *(ಜಿಜಾಂಟೆಸ್)* ಎಂದು ಬಳಸಿರುತ್ತದೆ. ಈ ಇಬ್ರಿಯ ಪದಕ್ಕೆ ಪ್ರಶ್ನಾರ್ಹವಾದ ಮೂಲೋತ್ಪತ್ತಿ ಇರುತ್ತದೆ; ಆದರೆ ಇದು ಬಹುಶಃ נָפַל *(ನಾಪಾಲ)* ಎಂಬ ಕ್ರಿಯಾಪದಕ್ಕೆ ಸಂಬಂಧಿಸಿದ್ದಾಗಿರಬಹುದು, ಇದರ ಅರ್ಥವು "ಬೀಳು" ಎಂದಾಗಿರುತ್ತದೆ. ವಿಷಯವು ಹಾಗಿರುವದಾದಲ್ಲಿ, ಅದರ ಅಕ್ಷರಶಃ ಅರ್ಥವು "ಬಿದ್ದು ಹೋದವರು"[16] ಎಂದಾಗಿರುತ್ತದೆಯೇ, ಹೊರತು "ಮಹಾಶರೀರಿಗಳು" ಎಂದಲ್ಲ.

ಇಂದು ನೆಫೀಲಿಯರನ್ನು ಮಹಾಶರೀರಿಗಳೆಂದು ಏಕೆ ಗುರುತಿಸಲಾಗುತ್ತದೆ? ಈ ರೀತಿಯ ಸಂಬಂಧಗೊಳಿಸುವಿಕೆಯು ಅರಣ್ಯಕಾಂಡ 13:32, 33ರಲ್ಲಿ ಇಸ್ರಾಯೇಲ್ಯರು ಕಾನಾನಿನಲ್ಲಿದ್ದ ಜನರನ್ನು ಕುರಿತು ಮಾಡುವ ಬಣ್ಣನೆಯಿಂದ ಬರುತ್ತದೆ. ಅವರ ಮಾತುಗಳು ಬಹುಶಃ ಕೆಲವೊಂದು ಅತಿಶಯೋಕ್ತಿಗಳನ್ನು ಒಳಗೊಂಡಿರಬಹುದಾಗಿದೆ, ಯಾಕೆಂದರೆ ಅವರು ತಾವು ನೋಡಿದ "ಜನರೆಲ್ಲರೂ ಬಹಳ ಎತ್ತರದವರು" ಎಂಬುದಾಗಿ ವಾದಿಸಿದರು. ಈ ಜನರಿಗೆ ಹೋಲಿಸಿದರೆ, ಇಸ್ರಾಯೇಲ್ಯರು ತಮ್ಮನ್ನು "ಮಿಡತೆಗಳಂತೆ" ಕಂಡುಕೊಂಡರು. ಹತ್ತು ಗೂಢಾಚಾರರು, ಭಯ ಹಾಗೂ ಅಪನಂಬಿಕೆಯುಳ್ಳವರಾಗಿದ್ದದರಿಂದ, ತಮಗೆ ಮತ್ತು ಕಾನಾನಿನಲ್ಲಿದ್ದ ಜನರ ನಡುವೆ ಯಾವ ವ್ಯತ್ಯಾಸಗಳಿರುತ್ತವೆ ಎಂಬುದರ ಬಗ್ಗೆ ಸ್ವಲ್ಪ

ಅಧಿಕವಾಗಿಯೇ ಹೇಳಿರುವ ಸಾಧ್ಯತೆಯಿದೆ. Timothy R. Ashleyನ ಪ್ರಕಾರವಾಗಿ, "ಗೂಢಾಚಾರರು ತಮ್ಮನ್ನು *ಮಿಡತೆಗಳು (ಹಾಗಾಬಿಮ್)* ಎಂಬುದಾಗಿ ಬಣ್ಣಿಸಿಕೊಂಡಿದ್ದು ಮಿತೋಕ್ತಿ ಎಂದು ಕರೆಯಲ್ಪಡುವ ಒಂದು ರೂಪಕ ಭಾಷೆಯಾಗಿರುತ್ತದೆ, ಅದು ಮತ್ತೊಂದು ಸಂಗತಿಯ ಗಾತ್ರ ಹಾಗೂ ಪ್ರಾಮುಖ್ಯತೆಯನ್ನು ಬೇರೊಂದಕ್ಕಿಂತ ಹೆಚ್ಚುಗೊಳಿಸುವದಕ್ಕಾಗಿ ಒಂದು ಸಂಗತಿಯನ್ನು ಕಡಿಮೆಗೊಳಿಸುವದಾಗಿದೆ."[17]

ಇಸ್ರಾಯೇಲ್ಯರು ಕಾನಾನ್ಯರನ್ನು ಬಣ್ಣಿಸಿದ್ದರಲ್ಲಿ ಉತ್ಪ್ರೇಕ್ಷೆಯು ಇದ್ದಿರಬಹುದಾದರೂ, ಇದು "ನೆಫೀಲಿಯರು" ಮತ್ತು ಬೃಹತ್ ದೇಹಾಕಾರದ ನಡುವಿನ ಸಂಬಂಧವನ್ನು ತಳ್ಳಿ ಹಾಕುವದಿಲ್ಲ. ಅರಣ್ಯಕಾಂಡ 13:33ನೇ ವಚನವು "ಅನಾಕ್ಯರನ್ನು" "ನೆಫೀಲಯರ" ಸಂಗಡ ಸಂಬಂಧಗೊಳಿಸುತ್ತದೆ. עֲנָק *(ಅನಾಕ)* ಎಂಬ ಇಬ್ರಿಯ ಪದದ ಮೂಲ ಅರ್ಥವು "ಕೊರಳು" ಅಥವಾ "ಕೊರಳಿನ ಹಾರ" ಎಂದಾಗಿತ್ತು, ಮತ್ತು "ಕ್ರಮೇಣದಲ್ಲಿ ಅನಾಕಿಮ್ ಒಂದು ಗೋತ್ರದ ಹೆಸರಾಗಿ ಮಾರ್ಪಟ್ಟಿತ್ತು, ಅದು 'ಉದ್ದವಾದ ಕೊರಳಿನವರು' (= ದೈತ್ಯ) ಎಂಬ ಅರ್ಥವನ್ನು ಹೊಂದಿರಬಹುದಾಗಿದೆ."[18] ಇತರ ವಾಕ್ಯಭಾಗಗಳು ಸೂಚಿಸುವದೇನೆಂದರೆ ಅನಾಕಿಮ್, ಮಾತ್ರವಲ್ಲದೆ ರೆಫಾಯಿಮರೆಲ್ಲರೂ ಎತ್ತರವಾಗಿದ್ದರು (ಧರ್ಮೋಪದೇಶಕಾಂಡ 1:28; 2:10, 11, 20, 21; 9:2). ಗೆದ್ದುಕೊಳ್ಳುವ ಸಂದರ್ಭದಲ್ಲಿ, ರೆಫಾಯರೊಳಗೆ ಬಾಷಾನಿನ ಅರಸನಾದ ಓಗನೊಬ್ಬನೇ ಉಳಿದಿದ್ದನು; ಆತನು ಅವನಿಗಿದ್ದ ಬೃಹತ್ ಕಲ್ಲಿನ ಮಂಚದಿಂದ ನೆನಪಿಸಿಕೊಳ್ಳಲ್ಪಡುತ್ತಾನೆ (ಧರ್ಮೋಪದೇಶಕಾಂಡ 3:11).[19] ಅನಾಕಿಮ್ ಹೆಬ್ರೋನಿನ ಸಮೀಪಸಲ್ಲಿ, ಯೆರೂಸಲೇಮಿನಿಂದ ದಕ್ಷಿಣಕ್ಕೆ ಸುಮಾರು ಇಪ್ಪತ್ತು ಮೈಲಿಗಳಷ್ಟು ದೂರದಲ್ಲಿ ಜೀವಿಸಿದ್ದನು (ಯೆಹೋಶುವ 14:13-15; 15:13, 14; ನ್ಯಾಯಸ್ಥಾಪಕರು 1:20). ಅನಂತರದಲ್ಲಿ, ಇಸ್ರಾಯೇಲ್ಯರ ಅರಸುಗಳ ಆಳ್ವಿಕೆಯ ಕಾಲದಲ್ಲಿ, ದಾವೀದನಿಗೆ ಗೋಲ್ಯಾತನೆಂಬ ಒಬ್ಬ ಫಿಲಿಷ್ಟಿಯರ ದೈತ್ಯನೊಬ್ಬನು ಎದುರಾದನು (1 ಸಮುವೇಲ 17:4-7, 41). ಅದಾದ ನಂತರದ ಕೆಲವು ವರ್ಷಗಳಲ್ಲಿ ಇನ್ನು ಕೆಲವು ದೈತ್ಯರ ಬಗ್ಗೆ ಸಹ ಪ್ರಸ್ತಾಪಿಸಲಾಗಿರುತ್ತದೆ (2 ಸಮುವೇಲ 21:16, 18, 20, 22; 1 ಪೂರ್ವಕಾಲವೃತ್ತಾಂತ 20:4, 6, 8).

6:4ರಲ್ಲಿನ ನೆಫೀಲಿಯರು ಶಾರೀರಿಕವಾಗಿ ದೈತ್ಯರಾಗಿರಬಹುದಾದರೂ, ವಾಕ್ಯವು ಇನ್ನಷ್ಟು ಹೆಚ್ಚು ಪ್ರಾಮುಖ್ಯವಾದ ಆತ್ಮೀಕ ವಿವರವನ್ನು ಸೂಚ್ಯಾರ್ಥವಾಗಿ ತಿಳಿಸುತ್ತದೆ: ಅವರು ಪಾಪದೊಂದಿಗೆ ಬೃಹತ್ ಸಮಸ್ಯೆಯನ್ನು ಹೊಂದಿದ್ದರು. ಅವರ ಹೆಸರಿಗೆ ತಕ್ಕ ಹಾಗೆಯೇ, ಅವರು "ಬಿದ್ದು ಹೋದವರ" ಹಾಗೆ ನಡೆದುಕೊಂಡಿರಬಹುದು, ಅಂದರೆ, ಕೆಟ್ಟತನವನ್ನು ನಡಿಸುವದರಲ್ಲಿಯೇ ಮುಳುಗಿ ಹೋಗಿದ್ದವರ ಜೀವಿತಗಳ ಭ್ರಷ್ಟವಾಗುವಿಕೆ ನಡೆದಿತ್ತು.

ನೆಫೀಲಿಯರು ಎಂದು ಪ್ರಸ್ತಾಪಿಸುವದು ಒಂದು ಪ್ರಸಿದ್ಧ ಯುಗವನ್ನು ಸೂಚಿಸುವ ಸಂಭವವಿರುತ್ತದೆ. ಈ ಕಾಲದ ವೇಳೆಯಲ್ಲಿಯೇ **ದೇವಪುತ್ರರು ಮನುಷ್ಯಪುತ್ರಿಯರನ್ನು ಕೂಡಿ ಅವರಲ್ಲಿ ಮಕ್ಕಳನ್ನು ಪಡೆಯುವ** ಕಾಲ (ನೋಡಿರಿ 6:2). ಕೆಲವು ಆವೃತ್ತಿಗಳು ಆ ಸಂಬಂಧಗಳಿಂದಾದ ಸಂತಾನದವರನ್ನು ನೆಫೀಲಿಯರು ಎಂಬುದಾಗಿ ಬಿಂಬಿಸುವ ಪ್ರಯತ್ನ ಮಾಡುತ್ತವೆ (TEV; CEV; NLT; NJPSV),[20] ಆದರೆ ಇದು ಸಂದೇಹಕರವಾಗಿರುತ್ತದೆ. ನೆಫೀಲಿಯರು "ದೇವಪುತ್ರರು" ಮತ್ತು "ಮನುಷ್ಯಪುತ್ರಿಯರಿಗೆ" ಸಮಕಾಲೀನರಾಗಿದ್ದರು ಎಂಬುದಾಗಷ್ಟೇ ವಾಕ್ಯವು ಸೂಚಿಸುತ್ತದೆ.

ವಚನವು "ಕಾಲದಲ್ಲಿ ಮಹಾಶರೀರಿಗಳು ಭೂಮಿಯ ಮೇಲಿದ್ದರು," ಮತ್ತು **ಅನಂತರದಲ್ಲಿಯೂ ಇದ್ದರು** ಎಂದು ಹೇಳುತ್ತದೆ. "ಅನಂತರದಲ್ಲಿಯೂ" ಎಂಬ ಪದಗುಚ್ಛವು ಎರಡು ವಿಧದಲ್ಲಿ ಅರ್ಥಮಾಡಿಕೊಳ್ಳಲ್ಪಟ್ಟಿದೆ. ಇದರರ್ಥವು ನೆಫೀಲಿಯರು ಬಹಳಷ್ಟು

ದೀರ್ಘಕಾಲದ ತನಕವೂ ಇರುವದನ್ನು ಮುಂದುವರೆಸಿದ್ದರು, ಬಹುಶಃ, ದೇವರು ಭೂಮಿಯ ಮೇಲೆ ಪ್ರಳಯವನ್ನು ಬರಮಾಡುವ ತನಕವೂ ಇದ್ದರು ಎಂದಾಗಿದೆ. ಇನ್ನೊಂದು ಅಭಿಪ್ರಾಯವು ಏನೆಂದರೆ ಈ ಪದಗುಚ್ಛವು ಪ್ರಳಯಕ್ಕೆ ಮುಂಚೆ ಮಾತ್ರವೇ ಅಲ್ಲ ಆದರೆ ಅದರ ನಂತರವೂ ನೆಫೀಲಿಯರು ಇದ್ದರು ಎಂಬುದನ್ನು ಸೂಚಿಸುತ್ತದೆ (ನೋಡಿರಿ ಅರಣ್ಯಕಾಂಡ 13:33). ಈ ಎರಡನೆಯ ಅಭಿಪ್ರಾಯದ ಸಾಧ್ಯತೆಯು ಇರುತ್ತದಾದರೂ, ಅನಂತರದಲ್ಲಿನ ನೆಫೀಲಿಯರು ಮೊದಲಿದ್ದವರ ಸಂತಾನವಾಗಿದ್ದಾರೆಂಬ ನಿರ್ಣಯಕ್ಕೆ ಬರಕೂಡದು. ನೋಹನ ಕುಟುಂಬವನ್ನು ಹೊರತು ಪಡಿಸಿ, ಭೂಮಿಯ ಮೇಲಿದ್ದ ಮನುಷ್ಯರೆಲ್ಲರೂ ಪ್ರಳಯದಲ್ಲಿ ಮರಣಿಸಿದ್ದರು.

4ನೇ ವಚನವು ಹೀಗೆ ಹೇಳುವ ಮೂಲಕ ಮುಕ್ತಾಯಕ್ಕೆ ಬರುತ್ತದೆ, **ಪೂರ್ವದಲ್ಲಿ ಹೆಸರುಗೊಂಡ ಪರಾಕ್ರಮಶಾಲಿಗಳು ಇವರೇ.** "ಇವರೇ" ಎಂಬ ಸರ್ವನಾಮವು ಯಾರನ್ನು ಸೂಚಿಸುತ್ತದೆ? ಮೂರು ಸಾಧ್ಯತೆಗಳೊಳಗೆ "ಮಕ್ಕಳು," "ದೇವಪುತ್ರರು," ಮತ್ತು "ನೆಫೀಲಿಯರು" ಸೇರಿರುತ್ತಾರೆ. ಬಹಳ ಸಂಭಾವ್ಯವಾಗಿ, ಈ ಬಣ್ಣನೆಯು ವಚನದ ಆರಂಭದಲ್ಲಿನ ನೆಫೀಲಿಯರಿಗೆ ಪುನಃ ಸಂಬಂಧಿಸುತ್ತದೆ. "ಪರಾಕ್ರಮಶಾಲಿಗಳು" (גִּבֹּרִים, *ಗಿಬ್ಬೊರಿಮ್)* ಎಂಬ ಪದವು ವೈಶಿಷ್ಟ್ಯವಾಗಿ ಯುದ್ಧವೀರರಿಗೆ ಬಳಸಲಾಗುತ್ತದೆ, ಉದಾಹರಣೆಗೆ ದಾವೀದನ "ಶೂರಸೈನಿಕರು" (2 ಸಮುವೇಲ 10:7; 16:6; 20:7; 23:8–39). 4ನೇ ವಚನದ "ಪರಾಕ್ರಮಶಾಲಿಗಳು" ದಾವೀದನಿಗೋಸ್ಕರ ಮತ್ತು ಆತನ ಸಾಮ್ರಾಜ್ಯಕ್ಕೋಸ್ಕರ ಯುದ್ಧ ಮಾಡಿದ ಶೂರರಿಗಿಂತಲೂ ಬಹಳ ಭಿನ್ನವಾಗಿದ್ದರು, ಯಾಕೆಂದರೆ ಇಲ್ಲಿ ಪ್ರಸ್ತಾಪಿಸಲ್ಪಟ್ಟಿರುವವರು ಕೊಲೆಯನ್ನು ಒಂದು ಕಲೆಯನ್ನಾಗಿ ಮಾಡಿದ ಒಂದು ಸಂಪೂರ್ಣ ಶಿಸ್ತು ಇಲ್ಲದ ಪಡೆಯಾಗಿದ್ದರು. ಅವರು "ಹೆಸರುಗೊಂಡ" ಜನರು, ಅಕ್ಷರಶಃ ಹೇಳುವದಾದರೆ, "ಖ್ಯಾತ ಮನುಷ್ಯರು" (אַנְשֵׁי הַשֵּׁם, *ಅನೆಶೆಯ ಹಶಶೇಮ್)* ಆಗಿದ್ದರು. ಅವರು ನಾಶನಕ್ಕೆ ಕುಖ್ಯಾತರಾಗಿದ್ದ ಪರಾಕ್ರಮಿ ಮನುಷ್ಯರಾಗಿದ್ದರು.

## ಮನುಷ್ಯನ ಕೆಟ್ಟತನ ಹಾಗೂ ದೇವರ ನ್ಯಾಯತೀರ್ಪು (6:5-7)

**[5]ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವದನ್ನೂ ಅವರು ಹೃದಯದಲ್ಲಿ ಯೋಚಿಸುವದೆಲ್ಲವು ಯಾವಾಗಲೂ ಬರೀ ಕೆಟ್ಟದ್ದಾಗಿರುವದನ್ನೂ [6]ಯೆಹೋವನು ನೋಡಿ ತಾನು ಭೂಮಿಯ ಮೇಲೆ ಮನುಷ್ಯರನ್ನು ಉಂಟುಮಾಡಿದ್ದಕ್ಕೆ ಪಶ್ಚಾತ್ತಾಪಪಟ್ಟು ತನ್ನ ಹೃದಯದಲ್ಲಿ ನೊಂದುಕೊಂಡನು. [7]ಮತ್ತು ಯೆಹೋವನು - ನಾನು ಸೃಷ್ಟಿಸಿದ ಮನುಷ್ಯ ಜಾತಿಯನ್ನು ಭೂಮಿಯ ಮೇಲಿನಿಂದ ಅಳಿಸಿಬಿಡುವೆನು; ಅದನ್ನು ಉಂಟುಮಾಡಿದ್ದಕ್ಕೆ ನನ್ನಲ್ಲಿ ಪಶ್ಚಾತ್ತಾಪ ಹುಟ್ಟಿತು; ಮನುಷ್ಯರೊಂದಿಗೆ ಸಕಲಮೃಗ ಕ್ರಿಮಿಪಕ್ಷಿಗಳನ್ನೂ ಅಳಿಸಿ ಬಿಡುವೆನು ಅಂದುಕೊಂಡನು.**

ಈ ವಿಭಾಗವು ದೈವಶಾಸ್ತ್ರೀಕವಾಗಿ ಪ್ರಾಮುಖ್ಯವಾದದ್ದು. ಇದು ಈ ವಿಚಾರಗಳಲ್ಲಿ ಅಂತರ್ದೃಷ್ಟಿಯನ್ನು ಒದಗಿಸುತ್ತವೆ (1) ಪ್ರಳಯಕ್ಕೆ ಮುನ್ನ ಮನುಷ್ಯರ ಹೃದಯಗಳೊಳಗೆ ಏನು ನಡೆಯುತ್ತಿತ್ತು, (2) ಮನುಷ್ಯನ ಕೆಟ್ಟತನಕ್ಕೆ ಪ್ರತಿಕ್ರಿಯೆಯಾಗಿ ದೇವರ ಮನೋಭಾವ, ಮತ್ತು (3) ನಾಶನವಾಗಲೆಂದು ದೇವರು ನೀಡಿದ ಶಾಸನಕ್ಕೆ ಕಾರಣ.

**ವಚನ 5. ಯೆಹೋವನು ನೋಡಿ** ಎಂಬ ಮಾತುಗಳು ವಿವಿಧ ಸ್ಥಳಗಳಲ್ಲಿ ಮಾನವ ವ್ಯವಹರಗಳೊಳಗೆ ದೇವರಿಗಿರುವ ಆಸಕ್ತಿ ಹಾಗೂ ಹಸ್ತಕ್ಷೇಪವನ್ನು ಪ್ರಕಟಗೊಳಿಸಲು

ಬಳಸಲ್ಪಟ್ಟಿವೆ (ನೋಡಿರಿ 29:31; ವಿಮೋಚನಕಾಂಡ 2:25; 3:4; 4:31). ಈ ಮಾತುಗಳು 1:31ರಲ್ಲಿ ಯೆಹೋವನ ಹೇಳಿಕೆಯನ್ನು ಜ್ಞಾಪಿಸುವಂತಿವೆ: "ದೇವರು ತಾನು ಉಂಟುಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹು ಒಳ್ಳೇದಾಗಿತ್ತು." ಹೇಗೂ, ತದ್ವಿರುದ್ಧತೆಯು ಅಷ್ಟೇನೂ ದೊಡ್ಡದಾಗಿ ಇಲ್ಲದಿರಬಹುದು; ಅನುಮೋದನೆಯಿಂದ ನೋಡುವದರ ಬದಲಾಗಿ, ಆತನು ಈಗ **ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವದನ್ನು** ಕಂಡನು.

ಈ ನಡವಳಿಕೆಯು ಮನುಷ್ಯನು ಏಕಾಏಕಿ ದಾರಿ ತಪ್ಪಿರುವಿಕೆಯಿಂದಾಗಿ ಆಗಿರಲಿಲ್ಲ; ಅದು ಬಹಳ ಕಾಲದಿಂದ ಇದ್ದ ರೂಢಿಯಾಗಿತ್ತು, ಇದು ಲೇಖಕನ ಮುಂದಿನ ಹೇಳಿಕೆಯಲ್ಲಿ ಸ್ಪಷ್ಟವಾಗುತ್ತದೆ: **ಅವರು ಹೃದಯದಲ್ಲಿ ಯೋಚಿಸುವದೆಲ್ಲವು ಯಾವಾಗಲೂ ಬರೀ ಕೆಟ್ಟದ್ದಾಗಿತ್ತು.** ಅಂಥ ಪಾಪವು ಆಕಸ್ಮಿಕ ಅಥವಾ ಕ್ಷಣಿಕವಾಗಿ ಮಾನವನಲ್ಲಿ ಆಗಿರಲಿಲ್ಲ; ಅದು ಯೋಜನೆ ಮಾಡಲ್ಪಟ್ಟದ್ದು, ಇಚ್ಛಾಪೂರ್ವಕವಾದದ್ದು, ಮತ್ತು ರೂಢಿಯಾಗಿ ಇರುವಂಥದ್ದು ಆಗಿತ್ತು. ಮನುಷ್ಯನು ಪ್ರತಿಯೊಂದೊಂದು ಗಳಿಗೆಯಲ್ಲಿಯೂ ತನ್ನ ಹೃದಯಗೊಳಗೆ ಕೆಟ್ಟ ಸಂಕಲ್ಪಗಳನ್ನು ಮಾಡಿಕೊಳ್ಳುತ್ತಿದ್ದನು, ಅದು ಆತನನ್ನು ಮತ್ತು ಅವನ ಸುತ್ತಲಿರುವವರನ್ನು ಹೊತ್ತಿ ಉರಿಸುವ ವರೆಗೂ ಸಾಗಿತ್ತು.

ಲೇಖಕನು ಪ್ರಳಯದ ಕಾರಣವನ್ನು ಆದಿಕಾಂಡ 3ರಲ್ಲಿ ಮನುಷ್ಯನ ಬೀಳುವಿಕೆಗೆ ಸಂಬಂಧಗೊಳಿಸುತ್ತಾನೆ. ಏದೆನ್ ತೋಟದಲ್ಲಿ, ಆದಾಮ ಮತ್ತು ಹವ್ವಳರು "ಒಳ್ಳೇದರ ಕೆಟ್ಟದ್ದರ ಅರುಹನ್ನು" ಅಪೇಕ್ಷಿಸಿದರು (3:5, 22). ಅವರಿಗುಂಟಾದ ಹೊಸ ಜ್ಞಾನವು ಅವರಿಗೆ ಆಶೀರ್ವಾದವಾಗಿ ಸಾಭಿತುಗೊಳ್ಳಲಿಲ್ಲ, ಆದರೆ ಅವರಿಗೂ ಅವರ ಸಂತತಿಯವರಿಗೂ ಒಂದು ದುರಂತವಾಗಿ ಮಾರ್ಪಟ್ಟಿತ್ತು. ಕೆಟ್ಟತನವನ್ನು ನಡಿಸುವದಕ್ಕೆ ಹೊಸ ದಾರಿಗಳನ್ನು ಕಲ್ಪಿಸಿಕೊಳ್ಳಬೇಕೆಂದು ಮನುಷ್ಯನಿಗಿದ್ದ ಪ್ರವೃತ್ತಿಯು ಹೆಚ್ಚುಕಡಿಮೆ ಅವನಿಗೆ ಒಳ್ಳೇದನ್ನು ಮಾಡಬೇಕೆಂದು ಇದ್ದ ಬಯಕೆಯನ್ನೇ ಪರಾಭವಗೊಳಿಸಿತ್ತು.

**ವಚನ 6.** ವ್ಯಾಪಕವಾಗಿದ್ದ ಕೆಟ್ಟತನಕ್ಕೆ ದೈವಿಕ ಪ್ರತಿಕ್ರಿಯೆಯು ಈ ಕೆಳಗಿನಂತಿರುತ್ತದೆ: **ಯೆಹೋವನು ನೋಡಿ ತಾನು ಭೂಮಿಯ ಮೇಲೆ ಮನುಷ್ಯರನ್ನು ಉಂಟುಮಾಡಿದ್ದಕ್ಕೆ ಪಶ್ಚಾತ್ತಾಪಪಟ್ಟು ತನ್ನ ಹೃದಯದಲ್ಲಿ ನೊಂದುಕೊಂಡನು.** ಈ ವಚನವು KJVಯಲ್ಲಿ ಅನುವಾದಿಸಲ್ಪಟ್ಟ ರೀತಿಯು ಕೆಲವರಿಗೆ ಕಷ್ಟವನ್ನುಂಟು ಮಾಡಿರುತ್ತದೆ: ತಾನು ಭೂಮಿಯ ಮೇಲೆ ಮನುಷ್ಯರನ್ನು ಉಂಟು ಮಾಡಿದ್ದಕ್ಕೆ ಪಶ್ಚಾತ್ತಾಪ ಪಟ್ಟನು." ಖಂಡಿತವಾಗಿಯೂ, ಬೈಬಲ್ ಇತರ ವಾಕ್ಯಭಾಗಗಳಲ್ಲಿ ಪಾಪ ಮಾಡುವದು ಅಥವಾ ಸುಳ್ಳು ಹೇಳುವದು ದೇವರಿಗೆ ಅಸಾಧ್ಯವೆಂದು ಹೇಳುತ್ತದಷ್ಟೆ; ಆದದರಿಂದ, ಆತನಿಗೆ ಪಶ್ಚಾತ್ತಾಪದ ಅಗತ್ಯವಿಲ್ಲ. ಆ ಪ್ರಕಾರವಾಗಿಯೇ, ನಾವು ಅರಣ್ಯಕಾಂಡ 23:19ರಲ್ಲಿ ಹೀಗೆ ಓದುತ್ತೇವೆ, "ದೇವರು ಮನುಷ್ಯನಂತೆ ಎರಡು ಮಾತಿನವನಲ್ಲ; ಮಾನವನಂತೆ ಮನಸ್ಸನ್ನು ಬೇರೆ ಮಾಡಿಕೊಳ್ಳುವವನಲ್ಲ" (ನೋಡಿರಿ 1 ಸಮುವೇಲ 15:29). 6:6ರಲ್ಲಿ ಕಾಣಿಸಿಕೊಳ್ಳುವ ಇಬ್ರಿಯ ಕ್ರಿಯಾಪದವು נחם (*ನಾಚಾಮ*) ಎಂಬ ಪದದಿಂದ ಬಂದಿರುತ್ತದೆ. ವೈಶಿಷ್ಟ್ಯವಾಗಿ, ಇದು ದೇವರನ್ನು ಸೂಚಿಸಿ ಬಳಸಲ್ಪಡುವಾಗ, ಅರ್ಥವು "ಪಶ್ಚಾತ್ತಾಪ" ಎಂಬುದಕ್ಕಿಂತ ವ್ಯತ್ಯಾಸವಾಗಿರುತ್ತದೆ, ಯಾಕೆಂದರೆ ದೇವರು ಎಂದಿಗೂ ಪಾಪ ಮಾಡಿದ ಅಪರಾಧಿಯಲ್ಲ. ಹಾಗಿದ್ದಾಗ್ಯೂ, ದೇವರು "ನೊಂದುಕೊಂಡನು" (NIV) ಎಂಬುದಂತೂ ನಿಜವಾದದ್ದು, ಆತನು ನಡೆದ ಸಂಗತಿಗೋಸ್ಕರ "ನೋವುಗೊಂಡನು" ಅಥವಾ "ವಿಷಾದಿಸಿದನು" ಎಂಬುದನ್ನು ಸೂಚಿಸುತ್ತದೆ.[21]

ದೇವರು ತನ್ನ ಚಿತ್ತಕ್ಕೆ ಮನುಷ್ಯನು ನೀಡುವ ಪ್ರತಿಕ್ರಿಯನ್ನಾಧರಿಸಿ, ಆ

ಮನುಷ್ಯನಿಗೋಸ್ಕರವಾಗಿ ತನ್ನ ಮನೋಭಾವ ಮತ್ತು ಯೋಜನೆಗಳನ್ನು ಬದಲಾಯಿಸಿಕೊಳ್ಳುವವನಲ್ಲ. ಇದರರ್ಥವು ದೇವರು ವಿಚಿತ್ರ ವರ್ತನೆಯವನು ಎಂಬುದಲ್ಲ; ಇದು ಆತನ ಸಾರ್ವಭೌಮತೆಯು ಮನುಷ್ಯನ ಜವಾಬ್ದಾರಿಯೊಂದಿಗೆ ಪರಸ್ಪರ ಸಂಬಂಧಿಸುವದಾಗಿದೆ ಎಂಬುದನ್ನು ತೋರಿಸುತ್ತದೆ (ನೋಡಿರಿ ವಿಮೋಚನಕಾಂಡ 32:12-14; 1 ಸಮುವೇಲ 15:11, 22-29; ಯೆರೆಮೀಯ 18:6-10; ಯೋನ 3:4-10). ಆದಿಯಲ್ಲಿ, ಮನುಷ್ಯರನ್ನು ಆಶೀರ್ವದಿಸಬೇಕೆಂಬುದು ದೇವರ ಬಯಕೆಯಾಗಿತ್ತು, ಆತನು ಅದನ್ನೇ ಮಾಡಿದನು (1:27, 28). ಆತನು ಉಂಟು ಮಾಡಿದ ಸಮಸ್ತವೂ "ಒಳ್ಳೇದು" ಆಗಿತ್ತು (1:4, 12, 18, 21, 25) - ವಾಸ್ತವಿಕದಲ್ಲಿ, "ಬಹು ಒಳ್ಳೇದು" ಆಗಿತ್ತು (1:31). ಆದಾಮ ಮತ್ತು ಹವ್ವಳರು ಸರ್ಪದ ಮಾತನ್ನು ಆಲಿಸಿ ಪಾಪ ಮಾಡಿದಾಗ, ಶಾಪಗಳು ಮತ್ತು ದಂಡನೆಗಳಿಗೆ ಚಾಲನೆ ಸಿಕ್ಕುವದರ ಜೊತೆಗೆ (2:17; 3:14-19, 22-24) ದೇವರ ಆಶೀರ್ವಾದಗಳು ಮುಂದುವರೆದಿದ್ದವು.

ಬಹಳ ಕಾಲವಾದ ಬಳಿಕ, ಮಾನವರು ಎಷ್ಟೊಂದು ದುಷ್ಟರಾದರೆಂದರೆ ಮನುಷ್ಯನ ಆಲೋಚನೆಗಳು ಮತ್ತು ಕೃತ್ಯಗಳು ನಿರಂತರವಾಗಿ ಕೆಟ್ಟವುಗಳೇ ಆಗಿದ್ದವು. ತತ್ಫಲಿತವಾಗಿ, ದೇವರು **ತನ್ನ ಹೃದಯದಲ್ಲಿ ನೊಂದುಕೊಂಡನು**; ಅಂದರೆ, ಇದು ಯೆಹೋವನಿಗೆ ಬಹಳವಾದ ಭಾವನಾತ್ಮಕ ವೇದನೆಯನ್ನುಂಟು ಮಾಡಿತ್ತು. ಈ ಕಾರಣಕ್ಕಾಗಿ, ಆತನು ತನ್ನ ಮನಸ್ಸನ್ನು ಬದಲಾಯಿಸಿಕೊಂಡನು ಮತ್ತು ಪ್ರಳಯಪೂರ್ವದ ಜಗತ್ತನ್ನು ಅಂತಿಮವಾದ ಶಾರೀರಿಕ ಶಾಪವನ್ನು ಬರಮಾಡಲು ದೃಢನಿರ್ಣಯ ಮಾಡಿಕೊಂಡನು: ಮರಣ. "ನೊಂದುಕೊಂಡನು" ಎಂಬುದನ್ನು ಅನುವಾದಿಸಿರುವ ಪದವು עָצַב (*ಅಟ್ಸಾಬ*) ಎಂಬುದು, ಮತ್ತು ಇದು 6ನೇ ವಚನದ ಮೊದಲ ಭಾಗದಲ್ಲಿ *ನಾಚಾಮ* ಎಂಬುದರ ಸಮಾನಾರ್ಥಕವಾಗಿ ಕೆಲಸ ಮಾಡುತ್ತದೆ. ಇದು "ಶಾರೀರಿಕ ನೋವು ಮಾತ್ರವಲ್ಲದೆ ಭಾವನಾತ್ಮಕ ದುಃಖವನ್ನು ಸಹ ಸೂಚಿಸಬಹುದಾಗಿದೆ"[22]; ಆದರೆ ದೇವರ ವೇದನೆಯನ್ನು ಸೂಚಿಸುವ ಎರಡನೆಯ ಅರ್ಥವು ಇಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ.[23]

ಮಾನವರ ನಿಮಿತ್ತವಾಗಿ ದೇವರು ವಿಷಾದದ ಪ್ರತಿಕ್ರಿಯೆಯನ್ನು ನೀಡಿದ್ದಕ್ಕೆ ಸೃಷ್ಟಿಯ ಕಾರ್ಯ ಒಂದು ದೈವಿಕ ತಪ್ಪು ಆಗಿತ್ತೆಂಬುದಕ್ಕೋಸ್ಕರ ಆಗಿರಲಿಲ್ಲ. ಅದಕ್ಕೆ ಮೂಲಕಾರಣವು ಮನುಷ್ಯನ ಭ್ರಷ್ಟತೆ ಮತ್ತು ಪಾಪವೇ, ಅದು ತನ್ನೊಳಗಿದ್ದ ದೇವರ ಸ್ವರೂಪವನ್ನು ಕುರೂಪಗೊಳಿಸಿತ್ತು. ಮನುಷ್ಯನನ್ನು ನಿರ್ಮಿಸಿದ್ದು ಒಂದು ದೋಷವಾಗಿರಲಿಲ್ಲ; ಮನುಷ್ಯನು ಸ್ವೇಚ್ಛಾ-ಚಿತ್ತವನ್ನು ದುರುಪಯೋಗಪಡಿಸಿಕೊಂಡು ತನ್ನನ್ನು ಹಿಂಸೆಯನ್ನು ನಡಿಸುವ ಕ್ರೂರಿಯನ್ನಾಗಿ ಮಾರ್ಪಡಿಸಿಕೊಂಡ ತಪ್ಪಾದ ರೀತಿಯೇ ಆಗಿತ್ತು. ಒಬ್ಬ ವೈಯಕ್ತಿಕ ದೇವರಾಗಿದ್ದು, ತನ್ನ ಪ್ರಿಯರು ದ್ರೋಹವನ್ನು ಬಗೆದಾಗ, ತಮ್ಮನ್ನು ಅವಮಾನಪಡಿಸಿಕೊಳ್ಳುವಾಗ, ತಮ್ಮ ಜೊತೆಯ ಮಾನವರ ಮೇಲೆ ದಬ್ಬಾಳಿಕೆ ಮಾಡುವಾಗ ದೇವರಿಗೆ ನೋವುಂಟಾಗುತ್ತದೆ (ನೋಡಿರಿ ಹೋಶೇಯ 11:1-8). ದೇವರ ಹೃದಯದಲ್ಲಿ ಹೇಳಲಾರದಷ್ಟು ನೋವು ಮತ್ತು ವೇದನೆಯನ್ನು ಉಂಟು ಮಾಡಿದ್ದು ಇದೇ ಆಗಿದೆ.

**ವಚನ 7.** ಈ ಹಂತದಲ್ಲಿ, **ಯೆಹೋವನು** ತನ್ನ ತೀರ್ಮಾನವನ್ನು ಪ್ರಕಟಿಸಿದನು: **ನಾನು ಸೃಷ್ಟಿಸಿದ ಮನುಷ್ಯ ಜಾತಿಯನ್ನು ಭೂಮಿಯ ಮೇಲಿನಿಂದ ಅಳಿಸಿಬಿಡುವೆನು; ಅದನ್ನು ಉಂಟುಮಾಡಿದ್ದಕ್ಕೆ ನನ್ನಲ್ಲಿ ಪಶ್ಚಾತ್ತಾಪ ಹುಟ್ಟಿತು.** "ಅಳಿಸಿಬಿಡುವೆನು" ಎಂಬುದನ್ನು ಅನುವಾದಿಸಿರುವ ಪದವು (מָחָה, *ಮಚಾಹ),* ಇದರ ವಾಸ್ತವಿಕ ಅರ್ಥವು "ಒರೆಸಿ ತೊಡೆದು ಹಾಕು"[24] ಎಂದಾಗಿರುತ್ತದೆ, ಒಬ್ಬನು ಪ್ರಾಚೀನ ಸುರುಳಿಯೊಂದರಿಂದ ಶಾಯಿಯ ಅಕ್ಷರಗಳನ್ನು

ಒರೆಸಿ ತೊಡೆದು ಹಾಕುವ ರೀತಿಯಲ್ಲಿ ಅದಾಗಿರುತ್ತದೆ. ಇಸ್ರಾಯೇಲ್ಯರು ಚಿನ್ನದ ಬಸವನನ್ನು ಆರಾಧಿಸಿದ ಬಳಿಕ ಮೋಶೆಯು ಅವರ ಪರವಾಗಿ ವಿಜ್ಞಾಪನೆಯನ್ನು ಮಾಡುವ ವೇಳೆ ಬಳಸಿದ ಪದವು ಇದೇ ಆಗಿರುತ್ತದೆ. ಅವರ ಪಾಪಗಳನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳುವವನಾಗಿ ಹೀಗೆ ಹೇಳಿದನು, "ಇಲ್ಲವಾದರೆ ನೀನು ಬರೆದಿರುವ [ಜೀವಿತರ] ಪಟ್ಟಿಯಿಂದ ನನ್ನ ಹೆಸರನ್ನೂ ಅಳಿಸಿಬಿಡಬೇಕೆಂದು ಕೇಳಿಕೊಳ್ಳುತ್ತೇನೆ" (ವಿಮೋಚನಕಾಂಡ 32:32). ದೇವರು ಜನರ ಕೆಟ್ಟತನದ ನಿಮಿತ್ತವಾಗಿ ಯೆಹೂದದ ಹಾಗೂ ಯೆರೂಸಲೇಮ್ ಪಟ್ಟಣದ ವಿರುದ್ಧವಾಗಿ ನ್ಯಾಯತೀರ್ಪಿನೊಂದಿಗೆ ಚಲಿಸಿದಾಗ, ಆತನು ಪಟ್ಟಣವನ್ನು "ಒಬ್ಬನು ಪಾತ್ರೆಯನ್ನು ಒರಸಿ ಡಬ್ಬುಹಾಕುವ ಮೇರೆಗೆ … ಒರಸಿ ಡಬ್ಬು ಹಾಕಿದನು" (2 ಅರಸು 21:13).

ಮನುಷ್ಯನ ಪಾಪದ ನಿಮಿತ್ತವಾಗಿ ದೇವರಿಗಾದ ದುಃಖವು **ಮನುಷ್ಯರೊಂದಿಗೆ ಸಕಲಮೃಗ ಕ್ರಿಮಿಪಕ್ಷಿಗಳನ್ನೂ ಅಳಿಸಿ ಬಿಡುವೆನು** ಎಂಬ ಹೇಳಿಕೆಯಲ್ಲಿ ಇನ್ನುಷ್ಟು ವ್ಯಕ್ತಪಡಿಸಲ್ಪಟ್ಟಿದೆ. ಲೋಕ ಸೃಷ್ಟಿಯ ಕ್ರಮವು ದೇವರ ಮೂಲ ಉದ್ದೇಶವನ್ನು ಬಿಟ್ಟು ಎಷ್ಟೊಂದು ವಿರೂಪ ಹಾಗೂ ಕುರೂಪಗೊಂಡಿತ್ತೆಂದರೆ ಅದನ್ನು ಸರಿಪಡಿಸುವದಕ್ಕೆ ಸಾಧ್ಯವೇ ಇರಲಿಲ್ಲ. ಪ್ರಥಮ ಪುರುಷ ಮತ್ತು ಸ್ತ್ರೀಯು ಪಾಪ ಮಾಡಿದಾಗ, ಎಲ್ಲಾ ಮಾನವ ಜಾತಿಯೂ ಶಾಪಗಳನ್ನು ಮತ್ತು ಪಾಪದ ಅಂತಿಮ ಪರಿಣಾಮವನ್ನು - ಮರಣ - ಅನುಭವಿಸಿತು. ಇಲ್ಲಿಯೂ ಹಾಗೆಯೇ ಆಗಿತ್ತು: ಮಾನವ ಕೆಟ್ಟತನದಿಂದ ಭೂಮಿಯು ಎಷ್ಟೊಂದು ಭ್ರಷ್ಟಗೊಂಡಿತ್ತೆಂದರೆ ಪ್ರಾಣಿಗಳು, ಸರಿಸೃಪಗಳು, ಮತ್ತು ಪಕ್ಷಿಗಳು ಮನುಷ್ಯನ ಪಾಪದ ಹೊಲಸನ್ನು ಹೊಗಲಾಡಿಸಿ ಲೋಕವನ್ನು ಶುದ್ಧ ಪಡಿಸಲಿದ್ದ ಪ್ರಳಯವನ್ನು ಅನುಭವಿಸುವವುಗಳಾಗಿದ್ದವು.

6:5-7ರಲ್ಲಿ ಮನುಷ್ಯನ ನಿರಾಶದಾಯಕ ಬಣ್ಣನೆಯ ನಂತರ, ಒಂದು ನಿರೀಕ್ಷೆಯ ಕಿರಣವು ವ್ಯಕ್ತಗೊಳಿಸಲ್ಪಡುತ್ತದೆ. ಮನುಷ್ಯನು "ಹೃದಯದಲ್ಲಿ ಯೋಚಿಸುವದೆಲ್ಲವು ಯಾವಾಗಲೂ ಬರೀ ಕೆಟ್ಟದ್ದಾಗಿರುವದು" (6:5) ಎಂಬ ಮೌಲ್ಯಮಾಪನವು ಭೂಮಿಯ ಮೇಲಿದ್ದ *ಪ್ರತಿಯೊಬ್ಬ* ವ್ಯಕ್ತಿಗೂ ಅನ್ವಯಿಸಲಿಲ್ಲ; ನೋಹನು ಅದಕ್ಕೆ ಹೊರತಾಗಿದ್ದನು.

## ನೀತಿವಂತ ನೋಹನು ಭ್ರಷ್ಟಗೊಂಡ ಲೋಕದೊಂದಿಗೆ ವಿರುದ್ಧ ಹೋಲಿಕೆ ಮಾಡಲ್ಪಟ್ಟದ್ದು (6:8-12)

**[8]ಆದರೆ ನೋಹನಿಗೆ ಯೆಹೋವನ ದಯವು ದೊರಕಿತು. [9]ನೋಹನ ಚರಿತ್ರೆಯು - ನೋಹನು ನೀತಿವಂತನೂ ತನ್ನ ಕಾಲದವರಲ್ಲಿ ತಪ್ಪಿಲ್ಲದವನೂ ಆಗಿದ್ದನು; ಅವನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು. [10]ಶೇಮ್, ಹಾಮ್, ಯೆಫೆತ್** ಎಂಬ **ಮೂರು ಮಂದಿ ಮಕ್ಕಳನ್ನು ಪಡೆದನು. [11]ಭೂಲೋಕದವರು ದೇವರ ದೃಷ್ಟಿಗೆ ಕೆಟ್ಟುಹೋಗಿದ್ದರು; ಅನ್ಯಾಯವು ಲೋಕವನ್ನು ತುಂಬಿಕೊಂಡಿತ್ತು. [12]ದೇವರು ಲೋಕವನ್ನು ನೋಡಿದಾಗ ಅದು ಕೆಟ್ಟುಹೋಗಿತ್ತು; ಭೂನಿವಾಸಿಗಳೆಲ್ಲರೂ ತಮ್ಮ ನಡವಳಿಕೆಯನ್ನು ಕೆಡಿಸಿಕೊಂಡಿದ್ದರು.**

**ವಚನ 8.** ಈ ವಚನವು **ಆದರೆ** ಎಂಬುದರೊಂದಿಗೆ ಆರಂಭಗೊಳ್ಳುತ್ತದೆ, ಇದು **ನೋಹ**ನಲ್ಲಿ ದೇವರು ದುಷ್ಟ ಲೋಕಕ್ಕಿಂತಲೂ ವ್ಯತ್ಯಾಸವಾಗಿರುವಂಥ ಗುಣಸ್ವಭಾವವನ್ನು ಕಂಡನು ಎಂಬುದನ್ನು ಸೂಚಿಸುತ್ತದೆ. **ನೋಹನಿಗೆ ಯೆಹೋವನ ದಯವು ದೊರಕಿತು.** NEBಯು ವಾಕ್ಯವನ್ನು "ನೋಹನು ಯೆಹೋವನ ಕಟಾಕ್ಷವನ್ನು ಗಳಿಸಿಕೊಂಡಿದ್ದನು" ಎಂದು ಅನುವಾದಿಸುತ್ತದೆ, ಸ್ಪಷ್ಟವಾಗಿರುವಂತೆ ಆತನು "ನೀತಿವಂತ" ಮತ್ತು "ತಪ್ಪಿಲ್ಲದವನು" (6:9)

ಆಗಿದ್ದರಿಂದ ಎಂಬಂತೆ ಇರುತ್ತದೆ. ನೋಹನು ತನ್ನ ನೀತಿವಂತಿಕೆಯ ಕಾರಣದಿಂದಾಗಿ ದೇವರ ದಯೆಯನ್ನು ಹೊಂದಲು ಯೋಗ್ಯನಾಗಿದ್ದನೆಂಬುದಾಗಿ ಈ ಅನುವಾದವು ಸೂಚ್ಯಾರ್ಥವನ್ನು ನೀಡುವಂತೆ ಕಾಣಿಸುತ್ತದಾದರೂ, ಇಂಥಹ ತಿಳುವಳಿಕೆಯು ತಪ್ಪಾದದ್ದು. ಒಬ್ಬ ಮನುಷ್ಯನ ಮೇಲೆ ಆತನ ನೀತಿವಂತಿಕೆಯ ಕಾರಣದಿಂದಾಗಿ ದಯೆಯನ್ನು ತೋರಿಸುವ ಕಡ್ಡಾಯಕ್ಕೆ ದೇವರು ಎಂದಿಗೂ ಒಳಪಟ್ಟವನಲ್ಲ. ಯಾವ ವ್ಯಕ್ತಿಯೂ ಸಂಪೂರ್ಣ ನೀತಿವಂತನಾಗಲಿ, ತಪ್ಪಿಲ್ಲದವನಾಗಲಿ, ಅಥವಾ ಪಾಪರಹಿತವಾಗಲಿ ಆಗಿರುವದಿಲ್ಲ (ಕೀರ್ತನೆ 14:1-3; 130:3; ಜ್ಞಾನೋಕ್ತಿ 20:9; ರೋಮಾ 3:23). ರಕ್ಷಣೆಯು ಯಾವಾಗಲೂ ದೇವರ ಕೃಪೆಯ ಮೇಲೆ ಆಧಾರವಾಗಿರುತ್ತದೆ (ರೋಮಾ 4:1-5; ಎಫೆಸ 2:8-10). "ದಯೆ" ಎಂಬುದನ್ನು ಅನುವಾದಿಸಿರುವ ಪದವು חֵן *(ಚೆನ್)* ಎಂಬುದು, ಅದನ್ನು "ಕೃಪೆ" ಎಂದು ಸಹ ಅನುವಾದಿಸಬಹುದಾಗಿದೆ ಯಾಕೆಂದರೆ ಅದು "ಉಚಿತವಾಗಿ ಕೊಡಲ್ಪಡುತ್ತದೆ."[25] ಸರಳವಾಗಿ ಹೇಳುವದಾದರೆ, ಅದನ್ನು ಎಂದಿಗೂ ಸಂಪಾದಿಸಿಕೊಳ್ಳುವದಕ್ಕಾಗಲಿ ಅಥವಾ ಪಡೆದುಕೊಳ್ಳುವವನು ಅದಕ್ಕೆ ಯೋಗ್ಯನನ್ನಾಗಿ ಮಾಡಿಕೊಳ್ಳುವದಕ್ಕಾಗಲಿ ಎಂದಿಗೂ ಸಾಧ್ಯವಿಲ್ಲ. ವಾಕ್ಯವು ಹೇಳುವದೇನೆಂದರೆ "ನೋಹನಿಗೆ ಯೆಹೋವನ ದಯವು ದೊರಕಿತು." ಈ ಕೃಪೆಯು ನೋಹನನಿಗೆ ಒಂದು ವರದಾನವಾಗಿ ಸಿಕ್ಕಂಥ ಸಂಗತಿಯಾಗಿದೆ, ಹೊರತು ಅದನ್ನು ಆತನು ತನ್ನ ಸ್ವಪ್ರಯತ್ನಗಳಿಂದ ಗಳಿಸಿಕೊಳ್ಳಲಿಲ್ಲ ಅಥವಾ ಸಾಧಿಸಿಕೊಳ್ಳಲಿಲ್ಲ. ಹೇಗೂ, ಆತನ ನಂಬಿಕೆಯ ನಿಮಿತ್ತವಾಗಿ, ಆತನು ದೇವರ ಕೃಪೆಯನ್ನು ಪಡೆದುಕೊಳ್ಳುವ ಸ್ಥಿತಿಯಲ್ಲಿದ್ದನು.

**ವಚನ 9.** ಈ ವಿಭಾಗವು ನೋಹನ ಕಥನದ ಕುರಿತಾಗಿ ಒಂದು ಸಮಗ್ರವಾದ ಚರ್ಚೆಯನ್ನು ಮಾಡುವ ಮೂಲಕ ಆರಂಭಗೊಳ್ಳುತ್ತದೆ, ಇದು ಪುಸ್ತಕದ ಮೊದಲ ಭಾಗದ ಮಧ್ಯಭಾಗವಾಗಿರುತ್ತದೆ: ಆದಿಕಾಂಡ 1-11. ಇಬ್ರಿಯ ಪದವು תּוֹלְדוֹת *(ಟೋಲೆಡೊಥ)*, ನಾವು 2:4ರಲ್ಲಿ ನೋಡಿರುವ ಪ್ರಕಾರ, ಇದರ ಅರ್ಥವು "ಸಂತತಿಗಳು," "ಚರಿತ್ರೆ," ಅಥವಾ "ಇತಿಹಾಸ" ಎಂದಾಗಿರುತ್ತದೆ; ಆದರೆ NASBಯು ಇಲ್ಲಿ *ಟೋಲೆಡೊಥ* ಎಂಬುದನ್ನು ವ್ಯಕ್ತಪಡಿಸುವದಕ್ಕೆ ಎರಡು ಪದಗಳನ್ನು ಬಳಕೆ ಮಾಡುತ್ತದೆ: **ಸಂತತಿಯವರ** ಮತ್ತು **ಚರಿತ್ರೆ**. ಎರಡೂ ವಿಚಾರಗಳು ಮುಂದೆ ಬರುವ ಬರಹದಲ್ಲಿ ಕಂಡು ಬರುತ್ತವೆ, ಯಾಕೆಂದರೆ 6:9-11:32 ವಾಕ್ಯಭಾಗವು **ನೋಹನ** ವಂಶಾವಳಿ ಮಾತ್ರವಲ್ಲದೆ ಸಂತತಿಯವರ ಐತಿಹಾಸಿಕ ದಾಖಲೆಯನ್ನು ಅಬ್ರಹಾಮನ ಕಾಲದ ತನಕವೂ ಗುರುತಿಸುತ್ತದೆ.

ಈ ಸನ್ನಿವೇಶದಲ್ಲಿ, ನೋಹನು ತನ್ನ ಸಮಕಾಲೀನರ ಕೆಟ್ಟತನದಿಂದ ಪ್ರತ್ಯೇಕವಾಗಿ ಒಬ್ಬ **ನೀತಿವಂತ** ಮನುಷ್ಯನಾಗಿ ನಿಲ್ಲುತ್ತಾನೆ. ಈತನು ನೀತಿವಂತನಾಗಿದ್ದನು ಎಂದು ಹೇಳುವದಾದರೆ, ಆಮೋಸನ ಪ್ರಕಾರವಾಗಿ ಆತನು ಜನರೊಂದಿಗೆ ನ್ಯಾಯವಾಗಿ ನಡೆದುಕೊಳ್ಳುತ್ತಿದ್ದನು ಎಂದರ್ಥ. ಪ್ರವಾದಿಯು ಆಮೋಸ 5:24ರಲ್ಲಿ ಈ ಪದಗಳನ್ನು ಸಮಾನಾರ್ಥದಲ್ಲಿ ಬಳಸಿರುತ್ತಾನೆ: "ನ್ಯಾಯವು ಹೊಳೆಯ ಹಾಗೆ ಹರಿಯಲಿ, ಧರ್ಮವು ಮಹಾನದಿಯಂತೆ ಪ್ರವಹಿಸಲಿ." ಇದು ಬಡವರನ್ನು ನಿಂದಿಸುತ್ತಾ, ದಬ್ಬಾಳಿಕೆ ಮಾಡುತ್ತಾ, ಮತ್ತು ದುರುಪಯೋಗ ಪಡಿಸಿಕೊಳ್ಳುತ್ತಾ ಇದ್ದವರ ವಿರುದ್ಧ ಒಂದು ದೋಷಾರೋಪಣೆ ಆಗಿತ್ತು (ಆಮೋಸ 5:11, 12). ಮೀಕನು ಹೇಳಿದ್ದೇನೆಂದರೆ ಯೆಹೋವನು ಮನುಷ್ಯರಿಂದ ಅಪೇಕ್ಷಿಸುವದು "ನ್ಯಾಯವನ್ನು ಆಚರಿಸುವದು, ಕರುಣೆಯಲ್ಲಿ ಆಸಕ್ತನಾಗಿರುವದು, ನಿನ್ನ ದೇವರಿಗೆ ನಮ್ರವಾಗಿ ನಡೆದುಕೊಳ್ಳುವದು" ಇಷ್ಟನ್ನೇ ಎಂದು ಹೇಳುತ್ತಾನೆ (ಮೀಕ 6:8). ಇದು ನೀತಿವಂತಿಕೆಗೆ ದೇವರ ಹಾಗೂ ಮನುಷ್ಯನ ಕಡೆಗೆ ಸಮರ್ಪಕವಾದ ಮನೋಭಾವಗಳು

ಮತ್ತು ಕ್ರಿಯೆಗಳಿರುವದು ಅಗತ್ಯವಾಗಿರುತ್ತದೆ ಎಂಬುದಾಗಿ ಬೇರೊಂದು ರೀತಿಯಲ್ಲಿ ಹೇಳುವ ರೀತಿಯಾಗಿದೆ ಮತ್ತು ಇದು ನೋಹನ ಜೀವಿತದಲ್ಲಿ ದೃಷ್ಟಾಂತಪಡಿಸಲ್ಪಟ್ಟಿತ್ತು. ಖಂಡಿತವಾಗಿಯೂ, ನೋಹನು "ನ್ಯಾಯ" (ನೀತಿಯನ್ನು) ಮತ್ತು ದೇವರ ಸಂಗಡ ನಮ್ರನಾಗಿ ನಡೆದುಕೊಳ್ಳುವದನ್ನು ತೋರ್ಪಡಿಸಿದ್ದನು. ನೋಹನ ಭಕ್ತಿಯುಳ್ಳ ನೀತಿಯ ಸ್ಮರಣೆಯನ್ನು ಅನಂತರದಲ್ಲಿ ಯೆಹೆಜ್ಕೇಲ 14:14, 20 ವಚನಗಳಲ್ಲಿ ಪ್ರಶಂಸಿಸಲಾಗುತ್ತದೆ, ಮತ್ತು ಹೊಸ ಒಡಂಬಡಿಕೆಯು ಅವನನ್ನು "ಸುನೀತಿಯನ್ನು ಬೋಧಿಸುವವನು" ಎಂದು ಕರೆಯುತ್ತದೆ (2 ಪೇತ್ರ 2:5).

ನೋಹನು **ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡ** ವ್ಯಕ್ತಿಯಾಗಿ **ತನ್ನ ಕಾಲದಲ್ಲಿ ತಪ್ಪಿಲ್ಲದವನೂ ಆಗಿದ್ದನು**. ಆತನನ್ನು "ತಪ್ಪಿಲ್ಲದವನು" ಎಂದು ಕರೆಯುವದು ಅವನು ಪಾಪರಹಿತನಾಗಿದ್ದನು ಎಂದು ಸೂಚಿಸುವದಿಲ್ಲ. ಇಬ್ರಿಯ ಪದವಾದ תָּמִים *(ಥಮ್ಮಿಮ)* ಎಂಬುದರ ಅರ್ಥವು ಪಾಪವಿಲ್ಲದವನಾಗಿ ಅಥವಾ ನೈತಿಕವಾಗಿ ಪರಿಪೂರ್ಣನಂತೆ ಜೀವಿಸುವವನು ಎಂದಾಗಿರುವದಿಲ್ಲ; ಅದರರ್ಥವು ಒಬ್ಬನು "ದೇವರ ವ್ಯಕ್ತಿತ್ವ ಮತ್ತು ನಿಯಮಗಳಿಗೆ ಸಮರ್ಪಣೆ" ಹೊಂದಿರುವದರಲ್ಲಿ "ಸಂಪೂರ್ಣನಾಗಿ" ಅಥವಾ "ಪೂರ್ಣ ಹೃದಯವುಳ್ಳವನಾಗಿ ಇರುವದು ಎಂದಾಗಿದೆ."[26] ದೇವರಿಗೆ ಸಂಪೂರ್ಣವಾಗಿ ಸಮರ್ಪಿತವಾಗಿರುವದಕ್ಕೆ ಅಂತರ್ಯದಲ್ಲಿ ದೃಢಸಂಕಲ್ಪ ಮಾಡಿಕೊಂಡಿರುವದು ಎಂಬ ವಿಚಾರವು ನೋಹನನು "ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು" ಎಂಬ ಹೇಳಿಕೆಯಿಂದ ಮತ್ತಷ್ಟು ಸಮರ್ಥಿಸಲ್ಪಡುತ್ತದೆ. ಒಟ್ಟಾಗಿ ಅರ್ಥೈಸಿಕೊಳ್ಳುವಾಗ, ಈ ವರ್ಣನಾತ್ಮಕ ಪದಗುಚ್ಛಗಳು ತೋರಿಸಿ ಕೊಡುವದೇನೆಂದರೆ ನೋಹನು ನೈತಿಕವಾಗಿ ಅತ್ಯಂಥ ಪ್ರಾಮಾಣಿಕ ಹಾಗೂ ಸತ್ಯವಂತನಾಗಿದ್ದನು ಎಂಬುದೆ. ಆತನು ದೇವರಿಗೆ ನಂಬಿಗಸ್ತನಾಗಿದ್ದನು ಮತ್ತು ತನ್ನ ಜೊತೆ ಮನುಷ್ಯನ ಸಂಗಡದ ವ್ಯವಹಾರಗಳಲ್ಲಿ ಪ್ರಾಮಾಣಿಕನು ಆಗಿದ್ದನು. ಆತನು ತನ್ನ ಸೃಷ್ಟಿಕರ್ತನಿಗೆ ಮಹಿಮೆಯನ್ನುಂಟು ಮಾಡುವಂಥ ಮನೋಭಾವ ಹಾಗೂ ಜೀವನ ಶೈಲಿಯುಳ್ಳವನಾಗಿ ದೇವರ ಸಂಗಡ ಅನ್ಯೋನ್ಯತೆಯಿಂದ ನಡೆದುಕೊಂಡನು, ಇದು ಭೂಮಿಯಲ್ಲೆಲ್ಲಾ ಹರಡಿಕೊಂಡಿದ್ದ ಕೆಟ್ಟತನಕ್ಕೆ ತದ್ವಿರುದ್ಧವಾಗಿತ್ತು.

**ವಚನ 10.** ಈ ವಚನವು ನೋಹನು **ಶೇಮ್, ಹಾಮ್, ಯೆಫೆತ್ ಎಂಬ ಮೂರು ಮಂದಿ ಮಕ್ಕಳನ್ನು ಪಡೆದನು** ಎಂದು ಹೇಳುತ್ತದೆ (ನೋಡಿರಿ 5:32). ಇಲ್ಲಿ ಅವರ ಹೆಸರುಗಳು ಏಕೆ ಸೇರ್ಪಡೆಗೊಳಿಸಲಾಗಿದೆ ಎಂಬುದು ಒಂದು ರೀತಿಯಲ್ಲಿ ಗೊಂದಲಕರವಾಗಿದೆ. ಹಲವಾರು ಸಂಭಾವ್ಯ ಕಾರಣಗಳನ್ನು ಸೂಚಿಸಲಾಗಿರುತ್ತದೆ. (1) ಮಾನವರ ಕೆಟ್ಟತನದ ಕುರಿತು ಇನ್ನಷ್ಟು ಬಣ್ಣಿಸುವದಕ್ಕೆ ಮುಂಚೆ, ಬಹುಶಃ ಲೇಖಕನು ಇಲ್ಲಿ ಮಿಕ್ಕ ಮಾನವ ಜಾತಿಗಿಂತಲೂ ಭಿನ್ನರಾಗಿದ್ದ ಈ ಮೂವರು ಪುತ್ರರು ಯಾರೆಂಬುದನ್ನು ತಿಳಿಸಲು ಬಯಸಿರಬಹುದಾಗಿದೆ. ಆಗ ವಾಚಕನು ಅವರು ಸಹ ಏಕೆ ಪ್ರಳಯಕ್ಕೊಳಗಾದಂತೆ ಕಾಪಾಡಲ್ಪಟ್ಟರು ಎಂಬುದನ್ನು ಅರಿತುಕೊಳ್ಳುವನು. (2) ಲೇಖಕನು ನೋಹನನ್ನು ಆದಾಮ ಮತ್ತು ತೇರಹ ಇವರೊಂದಿಗೆ ಸಂಬಂಧಗೊಳಿಸಲು ಬಯಸಿರಬಹುದು, ಇವರೊಬ್ಬರಿಗೆ ಮೂವರು ಪುತ್ರರಿದ್ದರು ಮತ್ತು ಇತಿಹಾಸದ ಪ್ರಾಮುಖ್ಯವಾದ ತಿರುವಿನ ಹಂತಗಳಲ್ಲಿ ಜೀವಿಸಿದವರಾಗಿದ್ದರು. (3) ಶೇಮ್, ಹಾಮ್, ಮತ್ತು ಯೆಫೆತ್ ಇವರ ಉಲ್ಲೇಖವು ಪ್ರಳಯದ ಕಥನದ ಪ್ರಕ್ಷೇಪವಾಗಿ ಕೆಲಸ ಮಾಡುತ್ತದೆ: ನೋಹನನ ಈ ಪುತ್ರರು (6:10), ನಾವೆಯನ್ನು ಪ್ರವೇಶಿಸಿದರು (7:13), ಪ್ರಳಯದಿಂದ ತಪ್ಪಿಸಿಕೊಂಡರು (9:18). ಅವರು ದೇವರಿಗೆ ಭಯಪಡುವಂಥ ಮನುಷ್ಯರಾಗಿದ್ದರೆಂಬುದು ಸ್ಪಷ್ಟವಾಗಿರುತ್ತದೆ, ಆದರೆ ಕಥೆಯಲ್ಲಿ

ಪ್ರತ್ಯೇಕವಾಗಿ ಎದ್ದು ಕಾಣುವವನು ನೋಹನೇ ಆಗಿದ್ದಾನೆ.

**ವಚನಗಳು 11, 12.** ವಾಕ್ಯವು ಹೇಳುವದೇನೆಂದರೆ **ಭೂಲೋಕದವರು ದೇವರ ದೃಷ್ಟಿಗೆ ಕೆಟ್ಟುಹೋಗಿದ್ದರು.** 6:11-13 ವಚನಗಳಲ್ಲಿ "ಭೂಲೋಕ" ಎಂಬುದು ಆರು ಸಾರಿ ಪ್ರಸ್ತಾಪಿಸಲ್ಪಟ್ಟಿದೆ. ಇಬ್ರಿಯ ಪದವಾದ ‌ שָׁחַת *(ಶಾಚಾಥ)* ಎಂಬುದು ಮೂರು ಸಾರಿ "ಕೆಟ್ಟು ಹೋಗಿತ್ತು" ಎಂದು ಮತ್ತು ಇದೇ ವಚನಗಳೊಳಗೆ ಒಂದು ಸಾರಿ "ನಾಶಗೊಳಿಸು" ಎಂದು ಅನುವಾದಿಸಲ್ಪಟ್ಟಿರುತ್ತದೆ. *ಶಾಚಾಥ* ಎಂಬುದಕ್ಕೆ ಬೇರೆ ಬೇರೆ ಸನ್ನಿವೇಶಗಳಲ್ಲಿ ಹಲವಾರು ಅರ್ಥಗಳಿರುತ್ತವೆ, ಉದಾಹರಣೆಗೆ "ಕೆಡಿಸು," "ಹಾಳು ಮಾಡು," ಅಥವಾ "ನಾಶಪಡಿಸು" (ನೋಡಿರಿ ಯೆರೆಮೀಯ 13:7; 18:4; NIV). ಎಲ್ಲಾ ಆಧುನಿಕ ತರ್ಜುಮೆಗಳು 6:13ರಲ್ಲಿ ಮಾನವರನ್ನು ನಾಶಗೊಳಿಸುವ (*ಶಾಚಾಥ*) ದೇವರ ತೀರ್ಮಾನವನ್ನು "ಭೂಲೋಕದೊಂದಿಗೆ" ನಾಶಮಾಡುವದಾಗಿ ತಿಳಿಸುತ್ತವೆ ಯಾಕೆಂದರೆ ಜನರನು ಅದನ್ನು "ಅನ್ಯಾಯದಿಂದ" "ತುಂಬಿಕೊಂಡಿರುವಂತೆ" ಮಾಡಿದ್ದರು. ಇದೇ *ಶಾಚಾಥಿ* ಎಂಬ ಪದವು ಭೂಮಿಯ ಸ್ಥಿತಿಯನ್ನು - **ಭೂನಿವಾಸಿಗಳೆಲ್ಲರೂ** ಏನು ಮಾಡುತ್ತಿದ್ದರು - ಮತ್ತು ದೇವರು ತನ್ನ ಸೃಷ್ಟಿಯ ಮೇಲೆ ಹೇಗೆ ನ್ಯಾಯತೀರ್ಪನ್ನು ಬರಮಾಡಲಿದ್ದನು ಎಂಬುದನ್ನು ಬಣ್ಣಿಸುವದಕ್ಕೆ ಬಳಸಲ್ಪಟ್ಟಿದೆ. ಈ ಪುನರಾವರ್ತನೆಯು ಸೂಚಿಸುವದೇನೆಂದರೆ ದೇವರ ಯೋಜನೆಯು ಮಾನವನು "ಹೆಚ್ಚುಕಡಿಮೆ ಸ್ವತಃ ತಾನೇ-ನಾಶಪಡಿಸಿಕೊಂಡದ್ದನ್ನು" ಅಥವಾ ಯಾವದನ್ನು "ಹೆಚ್ಚುಕಡಿಮೆ ಸ್ವತಃ-ನಾಶಗೊಳಿಸಿಕೊಳ್ಳಲಿದ್ದನೋ" ಅದನ್ನು ನಾಶಗೊಳಿಸುವದು ಆಗಿತ್ತು.[27]

**ಅನ್ಯಾಯವು ಲೋಕವನ್ನು ತುಂಬಿಕೊಂಡಿತ್ತು** ಎಂಬ ಹೇಳಿಕೆಯ ವಿಪರ್ಯಾಸವನ್ನು ತಪ್ಪಾಗಿ ಅರ್ಥಮಾಡಿಕೊಳ್ಳಬಾರದು. ದೇವರ ಮೂಲ ಉದ್ದೇಶವು ಪ್ರಾಣಿಗಳು ಮತ್ತು ಮನುಷ್ಯನು "ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ" ಎಂಬುದಾಗಿತ್ತು (1:22, 28). ಸಂತಾನೋತ್ಪತ್ತಿ ಮಾಡುವ ಮೂಲಕ ಲೋಕಕ್ಕೆ ಒಂದು ಆಶೀರ್ವಾದವಾಗುವದರ ಬದಲಾಗಿ, ಮಾನವರು ಅದನ್ನು ಎಷ್ಟೋಂದು "ಅನ್ಯಾಯ" ಮತ್ತು ಸಮೂಹ ನಾಶನದಿಂದ ತುಂಬಿಸಿದ್ದರೆಂದರೆ ಮಾನವನಿಂದ ಅದು "ಕೆಟ್ಟುಹೋಗಿತ್ತು" *(ಶಾಚಾಥ)*, ಅದನ್ನು ಭೂಮಿಯ ನಿವಾಸಿಗಳು ಅನುಭವಿಸುವದಕ್ಕಾಗಿ ಒಂದು ದುರಂತಕರ ಶಾಪವಾಗಿ ಮಾರ್ಪಡಿಸಿದ್ದನು.

11ನೇ ವಚನದಲ್ಲಿನ "ಅನ್ಯಾಯ" (חָמָס, *ಚಾಮಾಸ)* ಎಂಬ ಪದವು ಅನೇಕ ಸಾರಿ ಭೂಮಿಯನ್ನು ಹೊಲಸು ಮಾಡಿ ಪಾಪಿಗಳನ್ನು ದೇವರಿಂದಾಗುವ ಮರಣದಂಡನೆಯ ತೀರ್ಪಿಗೆ ಗುರಿಯಾಗುವ ಹಾಗೆ ಮಾಡುವಂಥ ತೀಕ್ಷ್ಣ ನಾಶನ, ರಕ್ತಪಾತ (ಕೊಲೆ), ಅತ್ಯಾಚಾರ, ದಬ್ಬಾಳಿಕೆ, ಮತ್ತು ಇನ್ನಿತರ ರೀತಿಯ ನೈತಿಕ ಅಪರಾಧಗಳನ್ನು ಸೂಚಿಸುವದಕ್ಕೆ ಬಳಸಲಾಗಿರುತ್ತದೆ (6:11, 13; 49:5; ನ್ಯಾಯಸ್ಥಾಪಕರು 9:24; ನೋಡಿರಿ ಯಾಜಕಕಾಂಡ 18:29; 20:11-18; ಯೆರೆಮೀಯ 13:22). ಅಂಥ ಜೀವನಶೈಲಿಯು ನೋಹನು ಆಚರಿಸುತ್ತಿದ್ದಂಥ ಮತ್ತು ದೇವರು ತನ್ನ ಜನರಿಂದ ಯಾವಾಗಲೂ ಬಯಸುವಂಥ ನ್ಯಾಯ ಮತ್ತು ನೀತಿಗಳನ್ನು ಧಿಕ್ಕರಿಸುತ್ತದೆ (ಯೆರೆಮೀಯ 22:3; ಯೆಹೆಜ್ಕೇಲ 45:9).[28] ಕೀರ್ತನೆ 11:5ರಲ್ಲಿ, ಲೇಖಕನು *ಚಾಮಾಸ*ನ್ನು ಕೆಟ್ಟದ್ದು ಮತ್ತು ದೇವರ ಸ್ವಭಾವಕ್ಕೆ ಮತ್ತು ಯಾವ ವಿಧದಲ್ಲಿ ಜೀವಿಸಬೇಕೆಂದು ಮನುಷ್ಯನನ್ನು ಸೃಷ್ಟಿಸಿದ್ದಾನೋ ಅದಕ್ಕೆ ವಿರುದ್ಧವಾದದ್ದೆಂದು ಬಣ್ಣಿಸುತ್ತದೆ. ಯೆಹೋವನು ಈ ವಿಧವಾದ ಜೀವಿತವನ್ನು ದ್ವೇಷಿಸುತ್ತಾನೆ ಮತ್ತು ಅದನ್ನು ಆಚರಿಸುವವರ ಮೇಲೆ ಪ್ರತೀಕಾರವನ್ನು ಬರಮಾಡುತ್ತಾನೆ (ಯೆಹೆಜ್ಕೇಲ 7:23, 24; 8:17, 18; 12:19, 20; 28:16; ಚೆಫನ್ಯ 1:9).[29]

# ಬರಲಿದ್ದ ಪ್ರಳಯದ ಬಗ್ಗೆ ಪ್ರಕಟಿಸಿದ್ದು ಮತ್ತು ನಾವೆಯನ್ನು ಕಟ್ಟಲು ದೇವರ ಅಪ್ಪಣೆಗಳು ಕೊಡಲ್ಪಟ್ಟಿದ್ದು (6:13-22)

**[13]ಆಗ ದೇವರು ನೋಹನಿಗೆ - ಎಲ್ಲಾ ದೇಹಿಗಳಿಗೂ ಅಂತ್ಯವನ್ನು ತೀರ್ಮಾನಿಸಿದ್ದೇನೆ;
ಭೂಲೋಕವು ಅವರ ಅನ್ಯಾಯದಿಂದ ತುಂಬಿ ಅದೆ; ನಾನು ಅವರನ್ನೂ ಭೂಮಿಯ
ಮೇಲಿರುವದೆಲ್ಲವನ್ನೂ ಅಳಿಸಿಬಿಡುತ್ತೇನೆ. [14]ನೀನು ತುರಾಯಿ ಮರದಿಂದ ನಾವೆಯನ್ನು
ಮಾಡಿಕೋ; ಅದರಲ್ಲಿ ತುಂಬ ಕೋಣೆಗಳು ಇರಬೇಕು; ಒಳಕ್ಕೂ ಹೊರಕ್ಕೂ ರಾಳವನ್ನು ಹಚ್ಚು.
[15]ನೀನು ಅದನ್ನು ಮಾಡಬೇಕಾದ ವಿಧಾನ ಹೇಗಂದರೆ - ಅದು ಮುನ್ನೂರು ಮೊಳ ಉದ್ದವೂ
ಐವತ್ತು ಮೊಳ ಅಗಲವೂ ಮೂವತ್ತು ಮೊಳ ಎತ್ತರವೂ ಉಳ್ಳದ್ದಾಗಿರಬೇಕು. [16]ಅದರ ಚಾವಣಿಯ
ಕೆಳಗೆ ಸುತ್ತಲೂ ಒಂದು ಮೊಳ ಎತ್ತರದ ಬೆಳಕು ಕಂಡಿಯನ್ನು ಮಾಡಬೇಕು; ಪಕ್ಕದಲ್ಲಿ
ಬಾಗಲನ್ನಿಡಬೇಕು. ನಾವೆಯಲ್ಲಿ ಒಂದರ ಮೇಲೆ ಒಂದಾಗಿ ಮೂರು ಅಂತಸ್ತುಗಳನ್ನು
ಮಾಡಬೇಕು. [17]ನಾನಂತೂ ಭೂಮಿಯ ಮೇಲೆ ಜಲಪ್ರಳಯವನ್ನು ಬರಮಾಡಿ ಆಕಾಶದ
ಕೆಳಗಿರುವ ಸಕಲ ಪ್ರಾಣಿಗಳನ್ನೂ ಅಳಿಸಿಬಿಡುವೆನು; ಭೂಮಿಯಲ್ಲಿರುವ ಸಮಸ್ತವೂ
ಲಯವಾಗುವದು. [18]ಆದರೆ ನಿನ್ನ ಕೂಡ ನನ್ನ ನಿಬಂಧನೆಯನ್ನು ಮಾಡುತ್ತೇನೆ. ನೀನು ಹೆಂಡತಿ
ಮಕ್ಕಳು ಸೊಸೆಯರು ಸಹಿತವಾಗಿ ನಾವೆಯಲ್ಲಿ ಸೇರಬೇಕು. [19]ಇದಲ್ಲದೆ ಜೀವಿಗಳ
ಪ್ರತಿಜಾತಿಯಲ್ಲಿಯೂ ಒಂದು ಗಂಡು ಒಂದು ಹೆಣ್ಣು ಹೀಗೆ ಎರಡೆರಡನ್ನು ನಾವೆಯಲ್ಲಿ ಸೇರಿಸಿ
ನಿನ್ನೊಂದಿಗೆ ಉಳಿಸಿ ಕಾಪಾಡಬೇಕು. [20]ಪಶು, ಪಕ್ಷಿ, ಕ್ರಿಮಿ ಇವುಗಳ ಸಕಲ ಜಾತಿಗಳಲ್ಲಿಯೂ
ಎರಡೆರಡು ಬದುಕುವದಕ್ಕಾಗಿ ನಿನ್ನ ಬಳಿಗೆ ಬರುವವು. [21]ಮತ್ತು ನಿನಗೂ ಅವುಗಳಿಗೂ
ಪೋಷಣೆಯಾಗುವಂತೆ ಸಕಲ ವಿಧವಾದ ಆಹಾರ ಪದಾರ್ಥಗಳನ್ನು ನಿನ್ನ ಬಳಿಯಲ್ಲಿ
ಕೂಡಿಸಿಡಬೇಕು ಎಂದು ಹೇಳಿದನು. [22]ದೇವರು ಅಪ್ಪಣೆಕೊಟ್ಟ ಪ್ರಕಾರವೇ ನೋಹನು
ಮಾಡಿದನು.**

ಪ್ರಳಯದ ಕಥಾನಿರೂಪಣೆಯಲ್ಲಿ ನೋಹನಿಗೆ ನೀಡಲಾದ ನಾಲ್ಕು ದೈವಿಕ ಉಕ್ತಿಗಳಲ್ಲಿ ಮೊದಲನೆಯದ್ದು 6:13–21ರಲ್ಲಿ ಇರುತ್ತದೆ.[30]

**ವಚನ 13. ದೇವರು ಭೂಲೋಕವು ಅನ್ಯಾಯ** ತುಂಬಿರುವ ಪರಿಸ್ಥಿತಿಯನ್ನು ಸಾರಾಂಶಗೊಳಿಸಿ ತಾನು **ಭೂಮಿಯ** ಮೇಲಿರುವ **ಎಲ್ಲಾ ದೇಹಿಗಳಿಗೂ** ಎಲ್ಲಾ ದುಷ್ಟ ಮಾನವರಿಗೂ **ನಾಶನ**ವನ್ನು ಬರಮಾಡುವದಕ್ಕೆ ನೈತಿಕ ಕಾರಣವಾಗಿರುತ್ತದೆಂದು **ನೋಹ**ನಿಗೆ ಹೇಳುತ್ತಾನೆ. ಮಾನವ ಜಾತಿಯವರು ವಿನಾಶತೆಯಿಂದ ಕೂಡಿದ್ದ ಕಾರಣದಿಂದಾಗಿ ದೇವರ ನ್ಯಾಯತೀರ್ಪು ಸನ್ನಿಹಿತದಲ್ಲಿತ್ತು. ಆರಂಭದಲ್ಲಿ ಹೇಗೆ ಬೀಳುವಿಕೆಯಿಂದಾಗಿ ಪ್ರಕೃತಿ ಮತ್ತು ಪ್ರಾಣಿ ಜಗತ್ತು ಪರಿಣಾಮಕ್ಕೊಳಗಾಗಿದ್ದವೋ (3:17–19; ನೋಡಿರಿ ರೋಮಾ 8:20, 21), ಹಾಗೆಯೇ ಈಗ ಅವುಗಳು ಮಾನವನ ಪಾಪದ ಕಾರಣದಿಂದ ಬಾಧೆಯನ್ನು ಅನುಭವಿಸಬೇಕಾಗಿತ್ತು.

ಪ್ರಳಯದ ಕುರಿತಾದ ಬೈಬಲ್ ಕಥನವು ಪ್ರಾಚೀನ ಮೆಸಪೋತಾಮ್ಯದ ಭ್ರಷ್ಟಗೊಂಡ ಪ್ರಳಯದ ಕಥೆಗಳಿಗೆ ಸುಸ್ಪಷ್ಟವಾದ ರೀತಿಯಲ್ಲಿ ವ್ಯತೀರಿಕ್ತವಾಗಿರುತ್ತವೆ. ಈ ಕಟ್ಟುಕಥೆಗಳೊಳಗೆ ಒಂದರಲ್ಲಿ, ಅತ್ರಾಸಿಸನಿಗೆ ಭೂಮಿಯ ಮೇಲೆ ಬರಲಿದ್ದ ಒಂದು ಸನ್ನಿಹಿತವಾದ ಪ್ರಳಯದ ಕುರಿತು ಎಂಕಿ ದೇವತೆಯು ಮುನ್ನೆಚ್ಚರಿಕೆ ಕೊಡುತ್ತದೆ. ದೇವರುಗಳು ನಿದ್ದೆ[31] ಮಾಡುವದಕ್ಕೆ ಸಾಧ್ಯವಾಗದಷ್ಟು ಗದ್ದಲವನ್ನು ಮನುಷ್ಯರು ಮಾಡುತ್ತಿದ್ದ ಕಾರಣ - ಪಾಪಕ್ಕೆ ದಂಡನೆ ರೂಪದಲ್ಲಿ ಅಲ್ಲ - ಪ್ರಳಯವು ಕಳುಹಿಸಲ್ಪಡಲಿತ್ತು.

**ವಚನ 14.** ದೇವರು ನ್ಯಾಯತೀರ್ಪನ್ನು ಪ್ರಕಟಿಸಿದ ನಂತರ ಬರಲಿರುವ ನಾಶನದಿಂದ ಆಯ್ದುಕೊಳ್ಳಲ್ಪಟ್ಟ ಕೆಲವರನ್ನು ರಕ್ಷಿಸುವ ಯೋಜನೆಯೊಂದನ್ನು ಘೋಷಿಸುತ್ತಾನೆ. ಈ ವ್ಯಕ್ತಿಗಳು ಭೂಮಿಯ ಮೇಲೆ ಬರಲಿದ್ದ ಪ್ರಳಯದ ನೀರಿನಿಂದ ಸುರಕ್ಷಿತವಾಗಿದ್ದು, ಸಾಗುವದಕ್ಕಾಗಿ ಒಂದು ವಿಶೇಷವಾದ ರೀತಿಯ ನಾವೆಯನ್ನು ನಿರ್ಮಿಸುವಂತೆ ನೋಹನಿಗೆ ಹೇಳಲಾಯಿತು. NASBಯು תֵּבָה (*ಥೆಬಾಹ*)[32] ಎಂಬ ಇಬ್ರಿಯ ಪದವನ್ನು **ನಾವೆ** ಎಂದು ಅನುವಾದಿಸುತ್ತದೆ. ಈ ಪದವು ಭೂಮಿಯ ಮೇಲೆ ವಿನಾಶಕರ ಜಲಸಮೂಹಗಳು ಇದ್ದಂಥ ವೇಳೆಯಲ್ಲಿ, ನೋಹ ಮತ್ತು ಆತನ ಕುಟುಂಬ, ಮಾತ್ರವಲ್ಲದೆ ಪ್ರಾಣಿಗಳು ಒಂದು ವರ್ಷಕ್ಕೂ ಅಧಿಕ ಕಾಲ ಜೀವಿಸುವದಕ್ಕೆ ಸಾಧ್ಯವಾಗುವಂತಹ ಒಂದು ಬೃಹತ್ ಹಡಗನ್ನು ಸೂಚಿಸುವದಕ್ಕೆ ಆದಿಕಾಂಡ 6-9 ಅಧ್ಯಾಯಗಳಲ್ಲಿ ಇಪ್ಪತ್ತಾರು ಸಾರಿ ಬಳಸಲ್ಪಟ್ಟಿರುತ್ತದೆ. ಈ ಪದದ ಇನ್ನೊಂದು ಬಳಕೆಯು ವಿಮೋಚನಕಾಂಡ 2:3, 5ರಲ್ಲಿ ಕಾಣಿಸಿಕೊಳ್ಳುವದಾಗಿದ್ದು, ಅದು ಅಲ್ಲಿ ಮೋಶೆಯನ್ನು ಆತನ ತಾಯಿಯು ಮಲಗಿಸಿದ ಚಿಕ್ಕ ನಾವೆಯನ್ನು ಸೂಚಿಸುತ್ತದೆ. ಆಕೆಯು ಅವನನ್ನು ಅದರಲ್ಲಿ ಮಲಗಿಸಿ ನೈಲ್ ನದಿಯ ಆಪು ಹುಲ್ಲುಗಳ ನಡುವೆ ತೇಲಾಡುವದಕ್ಕೆ ಬಿಟ್ಟಳು, ಮೋಶೆಯು ಇಬ್ರಿಯರ ಎಲ್ಲಾ ಗಂಡು ಶಿಸುಗಳನ್ನು ಹುಟ್ಟುವಾಗಲೇ ಕೊಲ್ಲಬೇಕೆಂಬ ಫರೋಹನ ರಾಜಾಜ್ಞೆಯಿಂದ ತಪ್ಪಿಸಿಕೊಂಡಿದ್ದನು.[33]

ನೋಹನು ಕಟ್ಟಿದ ನಾವೆಯು **ತುರಾಯಿ ಮರದಿಂದ** (גֹּפֶר, *ಗೊಪರ)* ನಿರ್ಮಿಸಲ್ಪಡಬೇಕಾಗಿತ್ತು, ಇದು ಅನುವಾದವಲ್ಲ ಆದರೆ ಒಂದು ಇಬ್ರಿಯ ಪದದ ಲಿಪ್ಯಂತರಣ ಆಗಿರುತ್ತದೆ. ಹಳೆಯ ಒಡಂಬಡಿಕೆಯೊಳಗೆ ಈ ಸ್ಥಳದಲ್ಲಿ ಮಾತ್ರವೇ ಈ ಪದವು ಕಂಡು ಬರುತ್ತದೆ. ಇದು ಗ್ರೀಕ್ ಭಾಷೆಯ κυπάρισσος *(ಕುಪಾರಿಸ್ಸೊಸ)* ಎಂಬ ಪದಕ್ಕೆ ಸಂಬಂಧ ಹೊಂದಿರಬಹುದಾಗಿದೆ, ಆ ಪದದ ಅರ್ಥವು "ಕಿಪ್ರೆಸ್" (NIV; NEB; NRSV), ಇದು ಕುಪ್ರದ್ವೀಪದ ಹೆಸರಿನಿಂದ ಬಂದದ್ದಾಗಿದೆ. ಈ ರಾಳದಂಥ ಮರವು ನೀರು ಪ್ರತಿರೋಧಕತೆಯನ್ನು ಹೊಂದಿತ್ತು, ಆದ್ದರಿಂದ ಪ್ರಾಚೀನ ಮಧ್ಯಪ್ರಾಚ್ಯದಲ್ಲಿ ಈ ಮರವು ಕಟ್ಟಡ ನಿರ್ಮಾಣ, ಹಡಗು, ಶವಪೆಟ್ಟಿಗೆಗಳು, ಪೀಠೋಪಕರಣಗಳು, ಸಂಗೀತ ವಾದ್ಯಗಳು, ಮತ್ತು ಇತರೆ ಸಾಮಗ್ರಿಗಳ ನಿರ್ಮಾಣದಲ್ಲಿ ಬಳಸಲಾಗುತ್ತಿತ್ತು.[34] ಇದು ನಾವೆಯ ನಿರ್ಮಾಣಕ್ಕೆ ಅತ್ಯಂಥ ದೀರ್ಘಬಾಳಿಕೆಯ ಕಟ್ಟಿಗೆಯಾಗಿರಬಹುದಾಗಿದೆ.

ನಾವೆಯನ್ನು **ತುಂಬಾ ಕೋಣೆಗಳಾಗಿ** (קִנִּים, *ಕ್ವಿನ್ನಿಮ್),* ಅಥವಾ "ವಿಭಾಗಗಳಾಗಿ" (NJPSV) ವಿಂಗಡಿಸಬೇಕಾಗಿತ್ತು. ಈ ಪದವು ಬಳಸಲ್ಪಟ್ಟಿರುವ ಹಳೆಯ ಒಡಂಬಡಿಕೆಯ ಮಿಕ್ಕ ಎಲ್ಲಾ ಸ್ಥಳಗಳಲ್ಲಿ, ಇದು ಪಕ್ಷಿಗಳ "ಗೂಡುಗಳು," ಅವುಗಳು ತಮ್ಮ ಚಿಕ್ಕ ಮರಿಗಳಿಗೋಸ್ಕರ ಏರ್ಪಡಿಸುವ ಮನೆಗಳನ್ನು ಸೂಚಿಸುತ್ತದೆ. ಆದದರಿಂದ, *ಕ್ವಿನಿಮ್* ಎಂಬುದನ್ನು ನೋಹನ ಕುಟುಂಬ ಹಾಗೂ ಪ್ರಾಣಿಗಳಿಗೋಸ್ಕರವಾದ ಕೋಣೆಗಳು ಅಥವಾ ವಿಭಾಗಗಳು ಎಂಬುದಾಗಿ ಅರ್ಥಮಾಡಿಕೊಳ್ಳತಕ್ಕದ್ದು, ಆದರೆ ಇದು ನಾವೆಯೊಳಗೆ ಕರೆದುಕೊಳ್ಳಬೇಕಾಗಿದ್ದ ಪಕ್ಷಿಗಳಿಗಾಗಿ ಇದ್ದ "ಗೂಡುಗಳು" ಎಂಬ ಅಕ್ಷರಶಃ ಅರ್ಥವನ್ನು ಹೊಂದಿರಬಹುದಾಗಿದೆ. ಸ್ವತಃ ನಾವೆಯನ್ನು **ರಾಳ**ದಿಂದ (כֹּפֶר, *ಕೊಪರ,* ಅಥವಾ "ಗಟ್ಟಿ ಡಂಬಾರು") ಮುಚ್ಚಿ ನೀರು ಹೋಗದಂತೆ ಭದ್ರಪಡಿಸಬೇಕಾಗಿತ್ತು. ಈ ವಚನದಲ್ಲಿ *ಗೊಪರ* ಮತ್ತು *ಕೊಪರ* ಎಂಬವುಗಳ ನಡುವೆ ಶಬ್ದಾಡಂಬರವಿರುವದು ಸ್ಪಷ್ಟವಾಗಿರುತ್ತದೆ: ಮೊದಲನೆಯದ್ದು ಬಳಸಲ್ಪಡಬೇಕಾಗಿದ್ದ ಕಟ್ಟಿಗೆಯ ವಿಧದ ಕುರಿತು ತಿಳಿಸಿದರೆ, ಎರಡನೆಯದ್ದು ಅದನ್ನು ಭದ್ರಪಡಿಸುವದಕ್ಕಾಗಿ ಬಳಸಬೇಕಿದ್ದ ವಸ್ತುವಿನ ಕುರಿತು ತಿಳಿಸುತ್ತದೆ.

**ವಚನ 15. ನಾವೆ**ಯು ಈ ಕೆಳಗಿನ ಅಳತೆಗಳಲ್ಲಿ ನಿರ್ಮಿಸಲ್ಪಡಬೇಕಾಗಿತ್ತು: **ಅದು**

**ಮುನ್ನೂರು ಮೊಳ ಉದ್ದವೂ ಐವತ್ತು ಮೊಳ ಅಗಲವೂ ಮೂವತ್ತು ಮೊಳ ಎತ್ತರವೂ ಉಳ್ಳದ್ದಾಗಿರಬೇಕು.** ಪ್ರಾಚೀನ ಜಗತ್ತಿನಲ್ಲಿ ಮೊಳ (אַמָּה, *ಅಮ್ಮಾಹ)* ಎಂಬುದಕ್ಕೆ ಪ್ರಮಾಣೀಕೃತವಾದ ಉದ್ದವು ಇಷ್ಟೇ ಎಂದೇನೂ ಇರಲಿಲ್ಲ; ಅದರ ಉದ್ದವು ಎಷ್ಟೆಂಬುದನ್ನು ಮಧ್ಯದ ಬೆರಳಿನ ತುದಿಯಿಂದ ಮೊಣಕೈ ವರೆಗಿನ ಉದ್ದವೆಂದು ನಿರ್ಧರಿಸಲಾಗುತ್ತಿತ್ತು, ಅದು ಆಯಾ ವ್ಯಕ್ತಿಗನುಗುಣವಾಗಿ ವ್ಯತ್ಯಾಸವಾಗಿರುತ್ತಿತ್ತು, ವಿಶೇಷವಾಗಿ ಬೇರೆ ಬೇರೆ ಕಾಲ ಹಾಗೂ ಸ್ಥಳಗಳಲ್ಲಿ ಅದು ವ್ಯತ್ಯಾಸವಾಗಿರುತ್ತಿತ್ತು. ಸಾಮಾನ್ಯವಾಗಿ, ಒಂದು ಮೊಳವನ್ನು ಸುಮಾರು ಹದಿನೆಂಟು ಇಂಚುಗಳಿಗೆ ಸಮವೆಂದು ಪರಿಗಣಿಸಲಾಗುತ್ತದೆ. ಹಾಗಿರುವದಾದಲ್ಲಿ, ನಾವೆಯು ಅಂದಾಜು 450 ಅಡಿಗಳಷ್ಟು ಉದ್ದ, 75 ಅಡಿಗಳಷ್ಟು ಅಗಲ, ಮತ್ತು 45 ಅಡಿಗಳಷ್ಟು ಎತ್ತರವಾಗಿದ್ದಿರಬಹುದಾಗಿದೆ. ಸ್ಪಷ್ಟವಾಗಿರುವಂತೆ, ನಾವೆಯು ಆಕಾರದಲ್ಲಿ ತ್ರಿಕೋನಾಕಾರದಲ್ಲಿರಬೇಕಾಗಿತ್ತು, ತಳವು ಸಮತಟ್ಟಾಗಿ ಮತ್ತು ಒಂದೊಂದು ತುದಿಯಲ್ಲಿ ಸಮಭುಜವಿರಬೇಕಾಗಿತ್ತು, ಇದು ಪ್ರಳಯದ ನೀರಿನಲ್ಲಿ ತೇಲಾಡಿ ಬದುಕುಳಿಯುವದಕ್ಕಾಗಿ ವಿನ್ಯಾಶಿಸಲ್ಪಟ್ಟ ಒಂದು ವಿಧವಾದ ತೇಲಾಡುವ ದೋಣಿಯಂತೆ ಇತ್ತು. ಇಂಥ ನಾವೆಯು ಪ್ರಳಯಪೂರ್ವದ ಜಗತ್ತಿಗೆ ಅತ್ಯಂಥ ದೊಡ್ಡದೆಂದು ಕಂಡಿರಬಹುದಾದರೂ, ಅದರ ಅಳತೆಯ ಪ್ರಮಾಣವು ಪ್ರಾಚೀನ ಬಾಬೆಲಿಗೆ ಸೇರಿದ *The Epic of Gilgamesh*ನಲ್ಲಿ ಬಣ್ಣಿಸಲ್ಪಟ್ಟಿರುವ ಅವಾಸ್ತವಿಕವಾದ ಹಡಗಿಗಿಂತಲೂ ಐದು ಪಟ್ಟು ಕಡಿಮೆಯಿತ್ತು.[35] ಹಡಗು ನಿರ್ಮಾಣದಲ್ಲಿ ಪರಿಣಿತರಾಗಿರುವವರು ನೋಹನ ನಾವೆಯು ಪರಿಪೂರ್ಣವಾಗಿ ಸಮುದ್ರಕ್ಕೆ ಯೋಗ್ಯವಾದದ್ದಾಗಿರಬಹುದು ಎಂದು ಒಪ್ಪಿಕೊಳ್ಳುತ್ತಾರೆ, ಬಾಬೆಲಿನ ನಾವೆಯು (ಅದು ಪ್ರತಿಯೊಂದು ದಿಕ್ಕಿನಲ್ಲಿಯೂ 180 ಅಡಿಗಳಷ್ಟು ಅಳತೆಯಲ್ಲಿ ನಿರ್ಮಿಸಲ್ಪಟ್ಟ ಒಂದು ಘನಾಕೃತಿ ಎಂದು ಹೇಳಲಾಗಿರುತ್ತದೆ[36]) ಬಹುಶಃ ಪ್ರಳಯದಲ್ಲಿ ಬದುಕುಳಿದಿರುವದಕ್ಕೆ ಸಾಧ್ಯವಿರುತ್ತಿರಲಿಲ್ಲ.

**ವಚನ 16.** ಈ ವಚನದ ಮೊದಲನೆಯ ಭಾಗವನ್ನು ಗ್ರಹಿಸಿಕೊಳ್ಳುವುದು ಕಷ್ಟಕರವಾಗಿರುತ್ತದೆ ಯಾಕೆಂದರೆ **ಬೆಳಕು ಕಂಡಿ** צֹהַר *(ಟ್ಸೊಹಾರ)* ಎಂಬ ಪದವು ಇಬ್ರಿಯ ಬೈಬಲಿನೊಳಗೆ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಈ ಪದವು "ಬೆಳಕು" (ASV), "ಛಾವಣಿ" (NIV; RSV; NRSV; NEB), ಮತ್ತು "ಹಗಲಿನ ಬೆಳಕು ಬರುವದಕ್ಕೆ ಒಂದು ರಂಧ್ರ" (NJPSV) ಎಂದು ಅನುವಾದಿಸಲ್ಪಟ್ಟಿರುತ್ತದೆ. ಕೊನೆಯ ಅನುವಾದವು ಇತರ ಸಾಧ್ಯತೆಗಳೊಳಗಿನ ಎರಡು ಪದಗಳನ್ನು ಒಂದುಗೂಡಿಸುತ್ತದೆ, "ಬೆಳಕು" ಮತ್ತು "ಕಿಟಕಿ" ಎಂಬ ಪದಗಳನ್ನು ಒಟ್ಟಾಗಿ ಸೇರಿಸಿ ಅನುವಾದಿಸುತ್ತದೆ. ಹೇಗೂ, *ಟ್ಸೊಹಾರ* ಎಂಬುದರ ಅರ್ಥವು "ಕಿಟಕಿ" ಎಂದಾಗಿರುವದಾದರೆ, 8:6ರಲ್ಲಿರುವ ಪ್ರಕಾರವಾಗಿ, ಸಾಮಾನ್ಯ ಇಬ್ರಿಯ ಪದವಾದ חַלּוֹן *(ಚಲ್ಲೊನ)* ಎಂಬದನ್ನು ಏಕೆ ಬಳಸಲಿಲ್ಲ, ಅಲ್ಲಿ ನೋಹನು ಒಂದು ಕಿಟಕಿಯನ್ನು ತೆರೆದನು ಎಂದು ಸ್ಪಷ್ಟವಾಗಿ ಉಲ್ಲೇಖಿಸುತ್ತದಲ್ಲವೇ? *ಟ್ಸೊಹಾರ* ಎಂಬುದನ್ನು "ಛಾವಣಿ" ಎಂಬುದಾಗಿ ಅನುವಾದಿಸಲ್ಪಟ್ಟಿದ್ದರ ಕುರಿತಾಗಿ ಸಹ ಅದೇ ಆಕ್ಷೇಪಣೆಯನ್ನು ಎತ್ತಬಹುದಾಗಿದೆ. ಬೈಬಲ್ ಲೇಖಕನು "ಛಾವಣಿ" ಎಂಬುದಕ್ಕಿರುವ ಸಾಮಾನ್ಯವಾದ ಪದವನ್ನು (גָּג, *ಗಾಗ)* ಬಳಸದೆ ಯಾವ ಖಚಿತವಾದ ಅರ್ಥವನ್ನೂ ಕೊಡದಂಥ ಅಸ್ಪಷ್ಟವಾದ ಪದವನ್ನು ಏಕೆ ಸೇರ್ಪಡೆಗೊಳಿಸಿದನು?

ಸಂಭಾವ್ಯವಾಗಿ, *ಟ್ಸೊಹಾರ* ಎಂಬ ಪದವು ಆದಿಕಾಂಡ ಪುಸ್ತಕದ ಲೇಖಕನ ಸಮಕಾಲೀನರಾದ ಜನರಿಗೆ ಪರಿಚಿತವಾಗಿರಬಹುದು. ಅದು ಶಾಸ್ತ್ರಗಳ ಉಳಿದ ಭಾಗದಲ್ಲಿ ಅನುಪಸ್ಥಿತವಾಗಿರುವದರ ಅರ್ಥವೇನೆಂದರೆ ಗಾಗ ಎಂಬ ಪದವು ಸಾಮಾನ್ಯ ಇಬ್ರಿಯ ಭಾಷೆಯಲ್ಲಿ ಹೆಚ್ಚು ಜನಪ್ರಿಯವಾಗುತ್ತಾ ಬಂದದರಿಂದ ಆ ಮೊದಲಿನ ಪದದ ಸ್ಥಾನದಲ್ಲಿ

ಬಳಕೆಗೆ ಬಂದಿತ್ತು ಎಂಬುದೆ. ಈ ವಾಕ್ಯದ ಕುರಿತು ಯಾವದೇ ನಿಶ್ಚಿತವಾದ ವಿವರಣೆಯನ್ನು ಕೊಡುವದಕ್ಕೆ ಸಾಧ್ಯವಿಲ್ಲ; ಆದರೆ ಟ್ಸೊಹಾರ ಎಂಬುದನ್ನು "ಒಂದು ಕಂಡಿ" ಎಂಬುದಾಗಿ ಸರಿಯಾಗಿ ಅನುವಾದ ಮಾಡುವದಾದರೆ, ಇದು ಸುಮಾರು ಒಂದು **ಮೊಳ** ಎತ್ತರವಿದ್ದು **ನಾವೆ**ಯನ್ನು ಸಂಪೂರ್ಣವಾಗಿ ಸುತ್ತುವರೆದಿದ್ದ ಮತ್ತು ಕೇವಲ ಛಾವಣಿಗೆ ಆಧಾರವಾಗಿ ಕೊಡಲಾಗಿದ್ದ ಕಂಬಗಳು ಮಧ್ಯದಲ್ಲಿ ಇರುವಂಥ ಖಾಲಿ ಸ್ಥಳವಾಗಿತ್ತು. *ಟ್ಸೊಹಾರ* ಎಂಬುದನ್ನು "ಛಾವಣಿ" ಎಂಬುದಾಗಿ ಅರ್ಥಮಾಡಿಕೊಳ್ಳುವದಾದರೆ, ಛಾವಣಿ ಮತ್ತು ನಾವೆಯ **ಅಂತಸ್ತುಗಳ** ನಡುವೆ ಒಂದು "ಮೊಳ" ಅಂತರವನ್ನು (ಬೆಳಕಿಗಾಗಿ) ಬಿಡಲಾಗಿದ್ದಂಥ ಕಿಂಡಿಯಾಗಿರಬಹುದು, ಇದು ಮಳೆಯನ್ನು ಒಳಗೆ ಬಾರದಂತೆ ತಡೆಯಲು ಮಾಡಿದ್ದ ನಾವೆಯ ಸುತ್ತಲು ಚಾಚಿಕೊಂಡಿರುವ ಭಾಗವಾಗಿತ್ತು.[37]

ವಾಕ್ಯವು ನಾವೆಯ **ಪಕ್ಕದಲ್ಲಿ ಬಾಗಲನ್ನಿಡಬೇಕು** ಎಂದು ಸಹ ಪ್ರಸ್ತಾಪಿಸುತ್ತದೆ, ಅದು ಪ್ರಳಯಕ್ಕೆ ಮುನ್ನ ನಾವೆಯೊಳಗೆ ಪ್ರವೇಶಿಸುವದಕ್ಕೆ (7:13-16) ಮತ್ತು ಭೂಮಿಯು ಸಾಕಷ್ಟು ಒಣಗಿದ ಬಳಿಕ ಎಲ್ಲಾ ನಿವಾಸಿಗಳು ತಮ್ಮ ಆಶ್ರಯ ಸ್ಥಳಗಳಿಗೆ ಹಿಂದಿರುಗುವದಕ್ಕೆ ಪ್ರಾಮುಖ್ಯವಾಗಿತ್ತು (8:13-19). ಇಬ್ರಿಯ ವಾಕ್ಯವು ನಾವೆಯಲ್ಲಿ ಮೂರು **ಅಂತಸ್ತುಗಳ** ಕುರಿತಾಗಿ ಸ್ಪಷ್ಟವಾಗಿ ಪ್ರಸ್ತಾಪಿಸುವದಿಲ್ಲ, ಆದರೆ ಮೂರು "ಅಂತಸ್ತುಗಳು" ಎಂಬುದನ್ನು ಲೇಖಕನು ಬೇರೊಂದು ವಿಧದಲ್ಲಿ ವ್ಯಕ್ತಪಡಿಸಿರುತ್ತಾನೆ. ಒಂದು ಅಕ್ಷರಶಃ ಅನುವಾದವೆಂದರೆ **ಒಂದರ ಮೇಲೆ ಒಂದಾಗಿ ಮೂರು** ಅಂತಸ್ತುಗಳು ಎಂದಾಗುವುದು. ಈ ಬಣ್ಣನೆಯು ನೋಹನಿಗೆ ಸಮಾನವಾಗಿರುವ ಪ್ರಾಚೀನ ಬಾಬೆಲಿನ ವ್ಯಕ್ತಿಗಿಂತಲೂ (ಉತ್ನಪಿಟ್ಸಿಮ್) ವ್ಯತ್ಯಾಸವಾಗಿರುತ್ತದೆ, ಆತನ ಹಡಗಿನಲ್ಲಿ "ಏಳು ಅಂತಸ್ತುಗಳು ಮತ್ತು ಒಂದೊಂದು ಅಂತಸ್ತಿನಲ್ಲಿ ಒಂಭತ್ತು ವಿಭಾಗಗಳು"[38] ಇದ್ದವು ಹೇಳಲಾಗಿರುತ್ತದೆ.

**ವಚನ 17.** ಸನ್ನಿಹಿತವಾದ ಪ್ರಳಯದ ಸಾರುವಿಕೆಯ ಮುಂಚೆ **ಇಗೋ** ಎಂಬ ಪದವು ಬಳಸಲ್ಪಡುತ್ತದೆ, ಯೆಹೋವನು ಶೀಘ್ರದಲ್ಲಿ ಮಾಡಲಿದ್ದ ಸಂಗತಿಯ ಕಡೆಗೆ ಗಮನವನ್ನು ಕೊಡುವಂತೆ ಕರೆಯುವದಾಗಿದೆ. ಆತನು **ಭೂಮಿಯ ಮೇಲೆ ಜಲಪ್ರಳಯವನ್ನು ಬರಮಾಡುವ** ಯೋಜನೆಯನ್ನು ಮಾಡಿದ್ದನು. "ಪ್ರಳಯ" ಎಂಬುದಕ್ಕಿರುವ ಈ (מַבּוּל, *ಮಾಬ್ಬುಲ)* ಎಂಬುದು, ನೋಹನ ಕಾಲದಲ್ಲಾದ ಪ್ರಳಯದ ವಿಷಯವಾಗಿ ಆದಿಕಾಂಡ 6-9ರಲ್ಲಿ, ಮತ್ತು ಪ್ರಕೃತಿ ಹಾಗೂ ಸಕಲ ಸೃಷ್ಟಿಯ ಮೇಲೆ ಯೆಹೋವನಿಗಿರುವ ಸಂಪೂರ್ಣ ಅಧಿಕಾರವನ್ನು ಸೂಚಿಸುವದಾಗಿ, ಕೀರ್ತನೆ 29:10ರಲ್ಲಿ ("ಯೆಹೋವನು ಜಲಪ್ರಳಯದಲ್ಲಿ ಆಸೀನನಾಗಿದ್ದನು; ... ಅರಸನಾಗಿ ಕೂತಿರುವನು") ಮಾತ್ರವೇ ಬಳಸಲ್ಪಟ್ಟಿರುತ್ತದೆ. ಲೋಕವನ್ನು ಮತ್ತು ಪ್ರತಿಯೊಂದು ಜೀವಿಯನ್ನು ಉಂಟು ಮಾಡಿದ್ದ ದೇವರಿಗೆ **ಆಕಾಶದ ಕೆಳಗಿರುವ ಸಕಲ ಪ್ರಾಣಿಗಳನ್ನೂ ಅಳಿಸಿಬಿಡುವ** ಸಾರ್ವಭೌಮ ಅಧಿಕಾರವಿತ್ತು ಯಾಕೆಂದರೆ "ಭೂನಿವಾಸಿಗಳೆಲ್ಲರೂ ತಮ್ಮ ನಡವಳಿಕೆಯನ್ನು ಕೆಡಿಸಿಕೊಂಡಿದ್ದರು" (6:12). ಅಧ್ಯಾಯದಲ್ಲಿ ಈ ಮುಂಚೆ, "ಭೂನಿವಾಸಿಗಳೆಲ್ಲರೂ" (6:12, 13) ಎಂಬುದರ ಅರ್ಥವು "ಎಲ್ಲಾ ದೇಹಿಗಳು" ಎಂದರ್ಥವಾಗಿತ್ತು (ನೋಡಿರಿ 7:21; 9:11, 15-17); ಆದರೆ ಇಲ್ಲಿ ಇದರಲ್ಲಿ "ಜೀವಶ್ವಾಸವುಳ್ಳ" (רוּחַ חַיִּים, *ರೂವಾಚ ಚಾಯ್ಯಿಮ್)* ಪ್ರತಿಯೊಬ್ಬ ಮಾನವ ಮತ್ತು ಪ್ರತಿಯೊಂದು ಪ್ರಾಣಿ ಎಂದಾಗಿದೆ. **ಆಕಾಶದ ಕೆಳಗಿರುವ** ಎಂಬುದು "ಭೂಮಿಯ ಮೇಲಿರುವ" ಎಂಬುದಕ್ಕೆ ಪರ್ಯಾಯವಾಗಿ ಬಳಸಿದ ಕಾವ್ಯಾತ್ಮಕ ಮಾತಾಗಿರಬಹುದು, **ಭೂಮಿಯಲ್ಲಿರುವ ಸಮಸ್ತವೂ** [ಶೀಘ್ರದಲ್ಲಿಯೇ] **ಲಯವಾಗುವದು** ಎಂಬುದನ್ನು ಒತ್ತಿ ಹೇಳುವದಾಗಿದೆ.

ಪ್ರಳಯವು ಸೃಷ್ಟಿಕಾರ್ಯದ ತದ್ವಿರುದ್ಧವಾಗಿರಲಿತ್ತು. ದೇವರು ಈಗ ಭೂಮಿ ಹಾಗೂ

ಅದರ ಮೇಲಿರುವ ಸಕಲ ಜೀವಿಗಳಿಗೆ ವೈರಿಯಂತೆ ಕೆಲಸ ಮಾಡಲಿದ್ದನು. ಖಂಡಿತವಾಗಿಯೂ, ಅದೇ ಅಂತಿಮ ವಾಕ್ಯವಾಗಿರಲಿಲ್ಲ, ಯಾಕೆಂದರೆ ಆತನು ಅದಕ್ಕೊಂದು ಹೊಸ ಆರಂಭವನ್ನು ಕೊಟ್ಟು ನವೀಕರಿಸುವದಕ್ಕಾಗಿ ನಾಶಗೊಳಿಸಿದನು.

**ವಚನ 18.** ದೇವರು "ಸಕಲ ದೇಹಿಗಳಿಗೂ" ಏನು ಮಾಡಬೇಕೆಂದು ಉದ್ದೇಶಿಸಿದ್ದನೋ ಅದರ ಹೊರತಾಗಿಯೂ, ಆತನು ನೋಹನ ಸಂಗಡ ತನ್ನ **ನಿಬಂಧನೆಯನ್ನು ಮಾಡುತ್ತೇನೆ** ಎಂದು ಹೇಳಿದನು. ಇದು ಹಳೆಯ ಒಡಂಬಡಿಕೆಯನ್ನು ಒಂದು "ನಿಬಂಧನೆ" (בְּרִית, *ಬೆರಿಥ್)* ಕುರಿತಾದ ಪ್ರಥಮ ಉಲ್ಲೇಖವಾಗಿರುತ್ತದೆ. ಪ್ರಾಥಮಿಕ ಆಶೀರ್ವಾದವು ನೋಹ, ಆತನ **ಹೆಂಡತಿ**, ಅವರ **ಮಕ್ಕಳು**, ಮತ್ತು **ಸೊಸೆಯರು** ತಪ್ಪಿಸಿ ಕಾಪಾಡಲ್ಪಡುವದೇ ಆಗಿತ್ತು. ಅವರೆಲ್ಲರೂ **ನಾವೆಯಲ್ಲಿ ಸೇರಬೇಕಾಗಿತ್ತು**, ಅಲ್ಲಿ ಅವರ ಪ್ರಾಣಗಳು ಭೂಮಿಯ ಮೇಲೆ ಬರಲಿದ್ದ ನೀರಿನ ಪ್ರವಾಹಗಳಿಂದ ತಪ್ಪಿಸಿ ಕಾಪಾಡಲ್ಪಡಲಿದ್ದವು (ನೋಡಿರಿ 7:7). ಇಲ್ಲಿ ಹೇಳಿಕೆಯನ್ನು ಬಹುಶಃ ಪ್ರಳಯದ ನಂತರದಲ್ಲಿ ಮಾಡಲ್ಪಟ್ಟ ಒಡಂಬಡಿಕೆಯ ನಿಜವಾದ ಉದ್ಘಾಟನೆಯ ಎದುರುನೋಡುವಿಕೆ ಎಂಬುದಾಗಿ ವ್ಯಾಖ್ಯಾನಿಸತಕ್ಕದ್ದು (9:1-17).

**ವಚನಗಳು 19, 20.** ನೋಹನ ಮತ್ತು ಆತನ ಕುಟುಂಬದ ಮುಖಾಂತರವಾಗಿ ಮಾನವರರು ಬದುಕುಳಿಯಬೇಕೆಂಬ ದೇವರು ಬಯಸಿದ್ದರ ಜೊತೆಗೆ, ಆತನ ಕಳಕಳಿಯಲ್ಲಿ ಪ್ರಾಣಿಗಳು ಸಹ ಸೇರಿದ್ದವು. **ಇದಲ್ಲದೆ ಜೀವಿಗಳ ಪ್ರತಿಜಾತಿಯೂ** ಸಂರಕ್ಷಿಸಲ್ಪಡಬೇಕು. ಯೇಹೋವನು ನೋಹನಿಗೆ **ಪಶು, ಪಕ್ಷಿ, ಕ್ರಿಮಿ ಇವುಗಳ ಸಕಲ ಜಾತಿಗಳಲ್ಲಿಯೂ ಎರಡೆರಡು** ಜೀವಿಗಳನ್ನು ಒಳಗೆ ಸೇರಿಸಿಕೊಳ್ಳಬೇಕು ಎಂದು ಅಪ್ಪಣೆ ಕೊಟ್ಟನು. ಈ ಎಲ್ಲಾ ಜೀವಿಗಳು ಬದುಕುಳಿಯುವದಕ್ಕೋಸ್ಕರ ಆತನ ಬಳಿಗೆ **ಬರುವವು**ಗಳಾಗಿದ್ದವು. ನೋಹನು ಈ ಎಲ್ಲಾ ಜೀವಿಗಳನ್ನು ಬಲೆಯಲ್ಲಿ ಹಿಡಿಯುವ ಅಥವಾ ಬೆನ್ನಟ್ಟುವ ಅವಶ್ಯಕತೆಯಿರಲಿಲ್ಲ. ದೇವರು ಈ ಕಡಿಮೆ ರೂಪದ ಜೀವರಾಶಿಗಳಲ್ಲಿ ಒಂದು ವಿಧವಾದ ಪ್ರಚೋದನೆಯನ್ನು ಮಾಡಿ ಅಥವಾ ಪ್ರವೃತ್ತಿಯನ್ನುಂಟು ಮಾಡಿ ಅವುಗಳು ತಮ್ಮ ನೆಲೆಗಳನ್ನು ಬಿಟ್ಟು ಸುರಕ್ಷತೆಗೋಸ್ಕರ ನಾವೆಯನ್ನು ಪ್ರವೇಶಿಸುವಂತೆ ನಡಿಸಿರಬಹುದು. ದೇವರು ಸೃಷ್ಟಿಕಾರ್ಯದ ಆರಂಭದಲ್ಲಿ "ಬಹು ಒಳ್ಳೇದು" ಎಂದು ಘೋಷಿಸಿದ್ದಂಥ (1:31) ಸಕಲ ಸೃಷ್ಟಿಯ, ಮಾನವ ಮತ್ತು ಪ್ರಾಣಿಗಳ ಎಲ್ಲಾ ಪ್ರತಿನಿಧಿಗಳನ್ನು ರಕ್ಷಿಸಬೇಕೆಂದು ಬಯಸಿದ್ದನು.

**ಒಂದು ಗಂಡು ಒಂದು ಹೆಣ್ಣು** ಎಂಬ ಉಲ್ಲೇಖವು ಯೆಹೋವನು ಪ್ರಾಣಿಗಳಿಗೆ ಮತ್ತು ಮಾನವರಿಗೆ ಸಂತಾನೋತ್ಪತ್ತಿಗಾಗಿ ಮಾಡಿದ್ದ ಏರ್ಪಾಟವು (1:22, 27, 28) ಮಾನವರ ಕೆಟ್ಟತನದ ಹೊರತಾಗಿಯೂ ಮುಂದುವರೆಯಬೇಕಾಗಿತ್ತು ಎಂಬುದನ್ನು ಸೂಚಿಸುತ್ತದೆ. ಲೋಕದ ಭವಿಷ್ಯದ ಸಕಲ ನಿರೀಕ್ಷೆಯನ್ನು ಪ್ರತಿನಿಧಿಸುವ "ಎಲ್ಲಾ ದೇಹಿಯೂ" ಪ್ರಳಯದ ಬಳಿಕ ದೇವರು ಒದಗಿಸಲಿದ್ದ ಹೊಸ ಸೃಷ್ಟಿಯನ್ನು ನಿರೀಕ್ಷಿಸುತ್ತಾ ಒಂದು ವರ್ಷ ಕಾಲ ಒಟ್ಟಾಗಿ ನಾವೆಯಲ್ಲಿ ಸಾಗಬೇಕಾಗಿತ್ತು. ಖಂಡಿತವಾಗಿಯೂ, ಇದರಲ್ಲಿ ಕೆಲವೊಂದು ಪ್ರಾಣಿಗಳು ಸೇರಿರಲಿಲ್ಲ, ಯಾವವೆಂದರೆ ಸುರಕ್ಷತೆಗೋಸ್ಕರ ನಾವೆಯ ಅಗತ್ಯವಿಲ್ಲದ ಜಲಚರಗಳೇ.

**ವಚನ 21.** ದೇವರು ನೋಹನಿಗೆ **ಪೋಷಣೆಯಾಗುವಂತೆ ಸಕಲ ವಿಧವಾದ ಆಹಾರ ಪದಾರ್ಥಗಳನ್ನು** ಸಂಗ್ರಹಿಸಿ ಅದನ್ನು ನಾವೆಯಲ್ಲಿಟ್ಟುಕೊಳ್ಳಬೇಕೆಂದು ಅಪ್ಪಣೆ ಕೊಟ್ಟನು. ಈ ಆಹಾರವು ಆತನ ಕುಟುಂಬಕ್ಕೆ ಮತ್ತು ಇತರ ಜೀವಿಗಳಿಗೆ ಪ್ರಳಯದ ವೇಳೆಯಲ್ಲಿ ಪೋಷಣೆಯಾಗಲಿತ್ತು. ನೋಹ ಮತ್ತು ಆತನ ಕುಟುಂಬವು, ಅಥವಾ ಮಾಂಸಹಾರಿ ಪ್ರಾಣಿಗಳು ನಾವೆಯಲ್ಲಿದ್ದ ವೇಳೆಯಲ್ಲಿ ಮಾಂಸ ಸೇವನೆ ಮಾಡಿದರೋ ಇಲ್ಲವೋ ಎಂಬುದು ತಿಳಿದು ಬಂದಿರುವದಿಲ್ಲ. ಅಶುದ್ಧ ಪ್ರಾಣಿಗಳಲ್ಲಿ ಕೇವಲ ಎರಡು ಜೋಡಿಗಳು ಮಾತ್ರವೇ ಇರುವಾಗ,

ಶುದ್ಧ ಪ್ರಾಣಿಗಳಲ್ಲಿ ಏಳು ಜೋಡಿಗಳು ನಾವೆಯಲ್ಲಿ ಸೇರಿಸಲ್ಪಟ್ಟಿದ್ದಕ್ಕೆ ಕಾರಣವು (7:2) ಬಹುಶಃ ನೋಹನ ಕುಟುಂಬ ಮತ್ತು ಮಾಂಸಹಾರಿ ಪ್ರಾಣಿಗಳು ಪ್ರಳಯವು ತಗ್ಗುವ ವರೆಗೂ ಕಾದುಕೊಂಡಿರುವ ವೇಳೆ ಇವುಗಳನ್ನು ಸೇವಿಸಬೇಕು ಎಂದಾಗಿರಬಹುದು ಎಂಬುದಾಗಿ ಕೆಲವರು ಅನುಮಾನಿಸುತ್ತಾರೆ. ಅಲ್ಲದೆ ಆದಾಮ ಮತ್ತು ಹವ್ವಳರು ಪಾಪ ಮಾಡಿದ ಬಳಿಕ, ದೇವರು ಪ್ರಾಣಿಯ ಚರ್ಮವನ್ನು ಅವರಿಗೆ ಉಡುಪುಗಳಾಗಿ ನೀಡಿದ ವೇಳೆ (3:21), ಪ್ರಥಮ ದಂಪತಿಗಳು ಆ ಕೊಲ್ಲಲ್ಪಟ್ಟ ಪ್ರಾಣಿಯ ಮಾಂಸವನ್ನು ಭೂಮಿಯ ಮೇಲೆ ಕೊಳೆಯುವಂತೆ ಬಿಡುವದರ ಬದಲಾಗಿ ಸೇವನೆ ಮಾಡಿರುವ ಸಾಧ್ಯತೆಯಿದೆ ಎಂದು ಸಹ ಅಭಿಪ್ರಾಯ ಪಡಲಾಗುತ್ತದೆ. ಹೇಬೆಲನು ತನ್ನ ಹೆತ್ತವರು ಏದೆನ್ ತೋಟದಿಂದ ಹೊರಡಿಸಲ್ಪಟ್ಟ ಸ್ವಲ್ಪ ಕಾಲದ ನಂತರದಲ್ಲಿ ತನ್ನ ಮಂದೆಯಲ್ಲಿನ ಚೊಚ್ಚಲ ಮರಿಯನ್ನು ಯಜ್ಞವಾಗಿ ಅರ್ಪಿಸಿದನಾದ್ದರಿಂದ (4:2-4), ಮನುಷ್ಯರು ಬಹುಶಃ ಮೊದಲ ಯಜ್ಞದ ಪ್ರಾಣಿಗಳ ಮಾಂಸವನ್ನು ಸಹ ಸೇವಿಸುತ್ತಿದ್ದಿರಬಹುದಾಗಿದೆ. ಇದು ಅನಂತರದಲ್ಲಿ ಮೋಶೆಯ ಧರ್ಮಶಾಸ್ತ್ರದಡಿಯಲ್ಲಿದ್ದ ಆಚಾರವಾಗಿತ್ತು, ಇದು ದೋಷಪರಿಹಾರಿಕಯಜ್ಞ (ಇದರ ಒಂದು ಭಾಗವು ಯಾಜಕನಿಗೆ ಸೇರುತ್ತಿತ್ತು, ಆದರೆ ಆರಾಧಕನಿಗೆ ಏನೂ ಸಿಕ್ಕುತ್ತಿರಲಿಲ್ಲ) ಮತ್ತು ಪೂರ್ಣಾಂಗಹೋಮಗಳಿಗೆ ಅನ್ವಯವಾಗುತ್ತಿರಲಿಲ್ಲ, ಎರಡನೆಯದ್ದು ಯೆಹೋವನಿಗೆ ಸಮರ್ಪಿತವಾಗಿರುತ್ತಿತ್ತು ಮತ್ತು ಯಜ್ಞವೇದಿಯ ಮೇಲೆ ಸಂಪೂರ್ಣವಾಗಿ ಸುಡಲ್ಪಡುತ್ತಿತ್ತು. ಈ ಎಲ್ಲಾ ಸಲಹೆಗಳು ಇರಬಹುದಾದ ಸಾಧ್ಯತೆಯಿದೆಯಾದರೂ, ಇವುಗಳ ಕೇವಲ ಊಹೆಗಳಷ್ಟೇ ಆಗಿರುತ್ತವೆ ಯಾಕೆಂದರೆ ನಮಗೆ ಈ ವಾಕ್ಯವು ಏನು ತಿಳಿಸುತ್ತದೋ ಅದಕ್ಕಿಂತ ಹೆಚ್ಚಿನ ವಿವರಗಳ ಕುರಿತು ನಿಖರವಾದ ಜ್ಞಾನವು ಇರುವದಿಲ್ಲ. ತಮ್ಮ ಆಹಾರದಲ್ಲಿ ಮಾಂಸವನ್ನು ಕೂಡಿಸಿಕೊಳ್ಳುವಂತೆ ಜನರಿಗೆ ನಿಜವಾದ ಅಧಿಕಾರವು ಪ್ರಳಯದ ನಂತರವಷ್ಟೇ ಕೊಡಲ್ಪಟ್ಟಿತು (9:2, 3).

**ವಚನ 22.** ಪುನರಾವರ್ತನೆಯನ್ನು ಬಳಕೆ ಮಾಡುತ್ತಾ, ಲೇಖಕನು ನೋಹನ ವಿಧೇಯತೆಯ ಬಗ್ಗೆ ಒತ್ತಿ ಹೇಳಿದನು. ಆತನು ಹೇಳಿದ್ದೇನೆಂದರೆ, **ದೇವರು ಅಪ್ಪಣೆಕೊಟ್ಟ ಪ್ರಕಾರವೇ ನೋಹನು ಮಾಡಿದನು** (ನೋಡಿರಿ 7:5). ಇಬ್ರಿಯರಿಗೆ ಪತ್ರಿಕೆಯ ಲೇಖಕನು ಸಹ ನೋಹನು ಪೂರ್ಣಹೃದಯದಿಂದ ದೇವರಿಗೆ ಸಮರ್ಪಿಸಿಕೊಂಡನು ಎಂಬುದನ್ನು ಒತ್ತಿ ಹೇಳುತ್ತಾನೆ: "ನಂಬಿಕೆಯಿಂದಲೇ ನೋಹನು ಅದುವರೆಗೆ ಕಾಣದಿದ್ದ ಸಂಗತಿಗಳ ವಿಷಯವಾಗಿ ದೈವೋಕ್ತಿಯನ್ನು ಹೊಂದಿ ಭಯಭಕ್ತಿಯುಳ್ಳವನಾಗಿ ತನ್ನ ಮನೆಯವರ ಸಂರಕ್ಷಣೆಗೋಸ್ಕರ ನಾವೆಯನ್ನು ಕಟ್ಟಿ ಸಿದ್ಧಮಾಡಿದನು" (ಇಬ್ರಿಯ 11:7). ಬೈಬಲಿನ ಕಥನವು ನೋಹನಿಗೆ ದೇವರು ಕೊಟ್ಟ ಆದೇಶವನ್ನು ತಿಳಿಯಪಡಿಸುತ್ತದೆ; ಆದರೆ ಸಾಕಷ್ಟು ಮರಗಳನ್ನು ಕಡಿದು ಅವುಗಳನ್ನು ನಿರ್ಮಾಣದ ಸ್ಥಳಕ್ಕೆ ಸಾಗಿಸುವದರಲ್ಲಿ, ಬೃಹತ್ ಹಲಿಗೆಗಳನ್ನು ಕತ್ತರಿಸಿ ಒಟ್ಟಾಗಿ ಸರಿಹೊಂದಿಸಿ ಜೋಡನೆ ಮಾಡಿ ನಾವೆಯನ್ನು ನಿರ್ಮಿಸುವದರಲ್ಲಿ ಬೇಕಾಗಿದ್ದ ಬಹಳಷ್ಟು ಸಮಯ, ಪರಿಶ್ರಮ ಮತ್ತು ವೆಚ್ಚಗಳು ಎಷ್ಟೆಂಬುದರ ಬಗ್ಗೆ ಏನನ್ನೂ ತಿಳಿಸುವದಿಲ್ಲ. ಅಂಥ ಸಾಧನೆಯನ್ನು ಮಾಡಿ ಮುಗಿಸುವದಕ್ಕಾಗಿ ನೋಹ ಮತ್ತು ಆತನ ಕುಟುಂಬವು ದೈಹಿಕ ಶಕ್ತಿ ಹಾಗೂ ಆರ್ಥಿಕ ಮೂಲಗಳನ್ನು ಹೇಗೆ ಒಗ್ಗೂಡಿಸಿಕೊಂಡರು ಎಂಬುದರ ಬಗ್ಗೆ ಕಥನವು ಮೌನವಾಗಿರುತ್ತದೆ. ಅವರು ನಾವೆಯಲ್ಲಿನ ಎಲ್ಲಾ ಬಿರುಕುಗಳನ್ನು ಮುಚ್ಚಿ ಭದ್ರಪಡಿಸುವದಕ್ಕೆ ಅಗತ್ಯವಾದ ಅಷ್ಟೊಂದು ದೊಡ್ಡ ಪ್ರಮಾಣದ ರಾಳವನ್ನು (ಡಾಂಬರು) ಹೇಗೆ ಸಂಗ್ರಹಿಸಿಕೊಂಡರು? ಒಂದು ವರ್ಷ ಕಾಲ ಸಮುದ್ರದ ಮೇಲೆ ಜೀವಿಸುವದಕ್ಕೆ ಅಷ್ಟೊಂದು ಪ್ರಾಣಿಗಳಿಗೆ ಮತ್ತು ಮನುಷ್ಯರಿಗೆ ಬೇಕಾಗಿದ್ದ ಬೃಹತ್ಪ್ರಮಾಣದ ಆಹಾರವನ್ನು ಹೇಗೆ

ಸಂಗ್ರಹಿಸಿಕೊಂಡರು?[39]

ಕೆಲಸವು ಬಹಳ ತತ್ತರಗೊಳಿಸುವಂಥದ್ದಾಗಿತ್ತು ಮತ್ತು ಅವರ ಕೆಲಸವನ್ನು ಪೂರ್ತಿಗೊಳಿಸಲು ನೋಹ ಮತ್ತು ಆತನ ಕುಟುಂಬಕ್ಕೆ ಅನೇಕ ವರ್ಷಗಳು ಹಿಡಿದಿರಬಹುದು. ನಾವೆ ಮತ್ತು ಅದಕ್ಕೆ ಬೇಕಾದ ವಸ್ತುಗಳನ್ನು ಸಿದ್ಧಪಡಿಸುವದರಲ್ಲಿ ಅವಶ್ಯವಾಗಿದ್ದ ಎಲ್ಲಾ ದುಡಿಮೆ ಮತ್ತು ಪರಿಶ್ರಮಗಳ ಮಧ್ಯದಲ್ಲಿಯೂ, ನೋಹನು ತನ್ನ ಸುತ್ತಲಿನ ಜನರ ಬಗ್ಗೆ ಕಳಕಳಿ ಹೊಂದಿದ್ದನು. ಪೇತ್ರನು ಅವನನ್ನು ಒಬ್ಬ "ಸುನೀತಿಯನ್ನು ಬೋಧಿಸುವವನು" (2 ಪೇತ್ರ 2:5) ಎಂದು ಕರೆದನು. ಆತನು ಕೆಲಸ ಮಾಡುತ್ತಿರುವ ವೇಳೆ, ಹಾದುಹೋಗುವವರಿಗೆ ಅವರ ದುಷ್ಟತನವನ್ನು ಬಿಟ್ಟು ಪಶ್ಚಾತ್ತಾಪ ಹೊಂದಿ ದೇವರ ಕಡೆಗೆ ತಿರುಗಿಕೊಳ್ಳಬೇಕೆಂದು, ಇಲ್ಲವಾದರೆ ಅವರು ಭೂಮಿಯ ಮೇಲೆ ಬರಲಿರುವ ವಿನಾಶಕರ ಪ್ರಳಯದಲ್ಲಿ ನಾಶವಾಗಿ ಹೋದಾರು ಎಂಬುದಾಗಿ ನೋಹನು ಬೇಡಿಕೊಳ್ಳುತ್ತಿದ್ದನೆಂದು ತೋರುತ್ತದೆ. ನೋಹನು ಬಣ್ಣಿಸಿದ ರೀತಿಯ ಪ್ರಳಯವನ್ನು ಲೋಕವು ಈ ಮುಂಚೆ ನೋಡಿರಲಿಲ್ಲವಾದ್ದರಿಂದ, ಜನರು ಅವನನ್ನು ನೋಡಿ ಅಪಹಾಸ್ಯದಿಂದ ನಗುವವರಾಗಿ "ಪ್ರಳಯದ ನೀರು ಬಂದು ಎಲ್ಲರನ್ನು ಬಡುಕೊಂಡುಹೋಗುವ ತನಕ" ಅವಿಧೇಯತೆಯಲ್ಲಿ ಮುಂದುವರೆದಿದ್ದರೆಂದು ಕಾಣಿಸುತ್ತದೆ (ಮತ್ತಾಯ 24:39). ಹಾಗಿದ್ದಾಗ್ಯೂ, ನೋಹನು ನಂಬಿಗಸ್ತನಾಗಿದ್ದನು, ಮತ್ತು ಆತನ ನಂಬಿಕೆಯು ಕಾಣದಂಥ ವಿನಾಶವು ಆತನಿಗೆ ಎಷ್ಟೊಂದು ನಿಜವೆಂದು ಕಾಣಿಸುವಂತೆ ಮಾಡಿತ್ತೆಂದರೆ ಆತನು ಬರಲಿದೆ ಎಂಬಂತೆ ನಡೆದುಕೊಳ್ಳಲು ಶಕ್ತನಾಗಿದ್ದನು. ಈ ಪ್ರಳಯಪೂರ್ವದ ಪೂರ್ವಜನು ಸನ್ನಿಹಿತವಾಗಿದ್ದ ಪ್ರಳಯಕ್ಕಾಗಿ ಮಾಡಿದ ಸಿದ್ಧತೆಯನ್ನು ಕುರಿತು ಒಂದು ತಕ್ಕದಾದ ಸಾರಾಂಶವನ್ನು ಆದಿಕಾಂಡದ ಲೇಖಕನು ಬರೆಯುತ್ತಾನೆ: "ದೇವರು ಅಪ್ಪಣೆಕೊಟ್ಟ ಪ್ರಕಾರವೇ ನೋಹನು ಮಾಡಿದನು."

# ಅನ್ವಯಿಸುವಿಕೆ

## ಪಾಪದ ಭಯಾನಕತೆ (ಅಧ್ಯಾಯ 6)

ಲೋಕವು ನಿಜಕ್ಕೂ ನಾಶನಕ್ಕೆ ಯೋಗ್ಯವಾಗಿತ್ತೋ ಅಥವಾ ದೇವರು ಒಂದು ದಿನ ತನ್ನ ತಾಳ್ಮೆಯನ್ನು ಕಳೆದುಕೊಂಡು ಪ್ರಳಯವನ್ನು ಕಳುಹಿಸಲು ನಿರ್ಧರಿಸಿದನೋ? ದೇವರು ಅನೇಕ ವಿಧದಲ್ಲಿ ಬಣ್ಣಿಸಲ್ಪಟ್ಟಿರುತ್ತಾನೆ - "ಮುಯ್ಯಿತೀರಿಸುವವನು, ಕೋಪಭರಿತನು" (ನಹೂಮ 1:2) ಎಂದು ಸಹ ಬಣ್ಣಿಸಲ್ಪಟ್ಟಿದ್ದಾನೆ. ಆತನು ಎಂದಿಗೂ ಹುಚ್ಚಾಟಿಕೆಗಳಿಗೆ ಅಥವಾ ಭಾವಲಹರಿಗಳಿಗೆ ಒಳಗಾಗುವವನಲ್ಲ. ಆತನಲ್ಲಿ "ಚಂಚಲತ್ವವೇನೂ ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ" (ಯಾಕೋಬ 1:17). ಬೈಬಲಿನುದ್ದಕ್ಕೂ, ದೈವಿಕ ಪ್ರತೀಕಾರ ಮತ್ತು ರೌದ್ರಗಳು ಯಾವಾಗಲೂ ದುಷ್ಟತನ, ಅಪರಾಧ, ಅವಿಧೇಯತೆ, ಹಾಗೂ ಬಂಡಾಯಗಳಿಗೆ ಸಂಬಂಧಿಸಿದಂತೆ ಕಾಣುತ್ತವೆ.[40] ದೇವರು ತನ್ನ ಪರಿಪೂರ್ಣ ನೀತಿಯಲ್ಲಿರುವವನಾಗಿ, ಪಾಪಕ್ಕೆ ದಂಡನೆಯಾಗದಂತೆ ಬಿಡುವದಕ್ಕೆ ಎಂದಿಗೂ ಸಾಧ್ಯವಿರುವದಿಲ್ಲ.

*ಲೋಕದ ದುಷ್ಟತನ.*

1. ಯಾವ ಲೋಕದಲ್ಲಿ ಮದುವೆಯು ಭ್ರಷ್ಟಗೊಂಡಿತ್ತೋ ಆ ಲೋಕದ ಮೇಲೆ ಪ್ರಳಯವು ಬಂದಿತ್ತು. ಮದುವೆ ವಿಷಯದಲ್ಲಿ ದೇವರು ಮೂಲತಃ ಹೊಂದಿದ್ದ ಯೋಜನೆಯೆಂದರೆ ಅದು ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯ ನಡುವೆ ಆಗಿತ್ತು, ಅವರನ್ನು ಆತನು ಗಂಡ ಮತ್ತು ಹೆಂಡತಿಯರನ್ನಾಗಿ ಒಂದುಗೂಡಿಸಿದ್ದನು. ಅವರು ನಿಜವಾದ

ತದ್ರೂಪಿಗಳು, ಸಂಗಾತಿಗಳು, ಮತ್ತು ಜೀವಿತ ಕಾಲಕ್ಕೆ ಸಹಭಾಗಿಗಳು ಆಗಿರಬೇಕಿತ್ತು; ಮತ್ತು ಅವರು ಮಕ್ಕಳು ತಮ್ಮ ಹೆತ್ತವರನ್ನು ಸನ್ಮಾನಿಸುವವರಾಗಿಯೂ ದೇವರನ್ನು ಮಹಿಮೆ ಪಡಿಸುವವರಾಗಿಯೂ ಬೆಳೆಯಬಹುದಾದ ಒಂದು ಸರಕ್ಷಿತ ಹಾಗೂ ಪ್ರೀತಿಯಿಂದ ಕೂಡಿದ ಮನೆಯನ್ನು ಒದಗಿಸಬೇಕಾಗಿತ್ತು (1:27, 28; 2:18–25). ಕಾಯಿನನು ತನ್ನ ತಮ್ಮನ ಕೊಲೆಯನ್ನು ಮಾಡಿದ (4:1–8) ಸಮಯದಿಂದ ಕುಟುಂಬವು ಒಡೆದು ಹೋಗಲಾರಂಭಿಸಿತ್ತು, ಮತ್ತು ಕಾಯಿನನ ಸಂತಾನದವರಲ್ಲೊಬ್ಬನಾದ ಲೆಮೆಕನು ಬಹಪತ್ನಿತ್ವವುಳ್ಳವನಾಗಿ ಮಾರ್ಪಟ್ಟಾಗ ಆ ಅವನತಿಯು ಇನ್ನಷ್ಟು ಮುಂದುವರೆದಿತ್ತು (4:19).

ಮದುವೆಯ ಭ್ರಷ್ಟತೆಯು ಪ್ರಳಯಕ್ಕೆ ಪೂರ್ವದ ಕಾಲದಲ್ಲಿ ಮುಂದುವರೆದಿತ್ತು, ಆ ವೇಳೆಯಲ್ಲಿ "ದೇವಪುತ್ರರು [ಬಹುಶಃ ಸೇತನ ಸಂತಾನದವರು] ಮನುಷ್ಯಪುತ್ರಿಯರ [ಬಹುಶಃ ಕಾಯಿನನ ಸಂತತಿಯವರು] ಸೌಂದರ್ಯವನ್ನು ನೋಡಿ ತಮಗೆ ಇಷ್ಟರಾದವರನ್ನು ಹೆಂಡರನ್ನಾಗಿ ಮಾಡಿಕೊಂಡರು" (6:2). ಇದರಿಂದ ಸೇತನ ಸಂತತಿಯರೆಲ್ಲರೂ ಭಕ್ತಿವಂತರಾಗಿದ್ದರು ಅಥವಾ ಕಾಯಿನನ ಸಂತತಿಯವರೆಲ್ಲರೂ ಭಕ್ತಿಹೀನರಾಗಿದ್ದರು ಎಂಬ ಸೂಚ್ಯಾರ್ಥವಾಗುವದಿಲ್ಲ. ಸೇತನ ವಂಶದಿಂದ ಬಂದ ಪುರುಷರು ಒಂದು ಸಾಮಾನ್ಯ ರೂಢಿ ಎಂಬಂತೆ ಬಹು ಪತ್ನಿಯರನ್ನು ಮಾಡಿಕೊಳ್ಳಲಾರಂಭಿಸಿದರು. ಅವರು ತಮ್ಮ ಮದುವೆಯ ಸಂಗಾತಿಗಳ ವಿಷಯದಲ್ಲಿ ಮಾಡಿದ ಆಯ್ಕೆಗಳು ಗುಣಸ್ವಭಾವ ಅಥವಾ ಗುಣಶೀಲಗಳ ಆಧಾರದಲ್ಲಿ ಆಗಿರಲಿಲ್ಲ, ಆದರೆ ಕೇವಲ ಶಾರೀರಿಕ ಆಕರ್ಷಣೆಯ ಮೇಲೆಯೇ ಆಗಿದ್ದವು. ಇದು ಸಮಾಜದಲ್ಲಿ ಅತ್ಯಂಥ ಪೈಪೋಟಿ, ದುರ್ಬಳಕೆ, ಮತ್ತು ಕಲಹಗಳುಂಟಾಗುವಂತೆ ನಡಿಸಿತ್ತೆಂಬುದರಲ್ಲಿ ಸಂದೇಹವೇ ಇಲ್ಲ.

2. ಬಹುಪತ್ನಿತ್ವದಲ್ಲಿ ಹುಟ್ಟಿದ ಸಂತಾನವು ಹಿಂಸೆ ಮತ್ತು ಎಲ್ಲಾ ವಿಧವಾದ ಕೆಟ್ಟತನಗಳನ್ನು ನಡಿಸುತ್ತಿದ್ದಂಥ ಲೋಕದ ಮೇಲೆ ಪ್ರಳಯವು ಬಂದಿತ್ತು. ಸೌಂದರ್ಯವತಿಯರಾದ ಹೆಂಡತಿಗೋಸ್ಕರ ಅತಿಯಾದ ಪೈಪೋಟಿಯಿಂದ ಕೂಡಿದ ಪರಿಸರದಲ್ಲಿ ಬೆಳೆದವರಾಗಿ, ಅಂಥ ದಾಂಪತ್ಯಗಳಲ್ಲಿ ಹುಟ್ಟಿದ ಸಂತಾನದವರು ಬಹುಶಃ ಸ್ತ್ರೀಯರ ವಿಷಯದಲ್ಲಿ, ಮಾತ್ರವಲ್ಲದೆ ಜೀವನದ ಬೇರೆ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಇಷ್ಟವನ್ನು ನೆರವೇರಿಸಿಕೊಳ್ಳಲು ಹಿಂಸೆಯ ಬಳಕೆಯನ್ನು ಮಾಡಿರಬಹುದಾಗಿದೆ. ಅವನತಿಯು ಎಷ್ಟೊಂದು ಪರಿಪೂರ್ಣವಾಗಿತ್ತೆಂದರೆ ಮನುಷ್ಯನು (ಮಾನವರು) "ಹೃದಯದಲ್ಲಿ ಯೋಚಿಸುವದೆಲ್ಲವು ಯಾವಾಗಲೂ ಬರೀ ಕೆಟ್ಟದ್ದಾಗಿತ್ತು" ಎಂಬುದನ್ನು ಕಥನವು ದೃಢಪಡಿಸುತ್ತದೆ (6:5). ಅಲ್ಲದೆ "ಅನ್ಯಾಯವು ಲೋಕವನ್ನು ತುಂಬಿಕೊಂಡಿತ್ತು" (6:11) ಎಂದು ಸಹ ಅದು ತಿಳಿಸುತ್ತದೆ.

6:4ನೇ ವಚನವು ನೆಫೀಲಿಯರು ಮಾಡುತ್ತಿದ್ದ ಪಾಪಗಳಾವವೆಂದು ನಿರ್ದಿಷ್ಟವಾಗಿ ತಿಳಿಸುವದಿಲ್ಲವಾದರೂ, ಹೆಚ್ಚುಕಡಿಮೆ ಅವರು ಸೃಷ್ಟಿಯ ಕಾಲದಿಂದಲೂ ಮಾನವನ ಹೃದಯದಲ್ಲಿ ಬರೆಯಲಾಗಿದ್ದ (ರೋಮಾ 2:14, 15) ಮತ್ತು ಅನಂತರದಲ್ಲಿ ದಶಾಜ್ಞೆಗಳೊಳಗೆ ಕ್ರೂಡೀಕರಿಸಲ್ಪಟ್ಟಿದ್ದಂಥ (ವಿಮೋಚನಕಾಂಡ 20:3–17) ಪ್ರತಿಯೊಂದು ಕಟ್ಟಳೆಯನ್ನು ಉಲ್ಲಂಘಿಸಿದರು ಎಂದು ಅದು ಸೂಚ್ಯಾರ್ಥವಾಗಿ ತಿಳಿಸುತ್ತದೆ. ಜನರು ಕೇವಲ ಪ್ರಾಣಿಗಳ ಮಟ್ಟದಲ್ಲಿ ಜೀವಿಸುತ್ತಿದ್ದದ್ದು ಮಾತ್ರವೇ ಅಲ್ಲ, ಆದರೆ ಪ್ರಾಣಿಗಳು ಸಹ ಮಾಡದೆ ಇದ್ದಂಥ ಕೃತ್ಯಗಳನ್ನು ಅವರು ಮಾಡುವವರಾಗಿದ್ದರು, ಸಮಾಜದ ಮೇಲೆ ವಿನಾಶತೆಯನ್ನುಂಟು ಮಾಡಿದ್ದರು. ಈ ಕಾರಣಕ್ಕಾಗಿ, ಅವರು "ಪರಾಕ್ರಮಿಶಾಲಿಗಳು" ಮತ್ತು "ಹೆಸರುಗೊಂಡ" ವ್ಯಕ್ತಿಗಳು (ಅಕ್ಷರಶಃ, ಖ್ಯಾತಿಯ ವ್ಯಕ್ತಿಗಳಾಗಿದ್ದರು; 6:4) ಆಗಿದ್ದರು. ಅವರು ಅವರ ಸಮಾಜದಲ್ಲಿನ ಪರಾಕ್ರಮಶಾಲಿ ವ್ಯಕ್ತಿಗಳಾಗಿದ್ದರು, ಅವರು ಕೆಟ್ಟತನಕ್ಕೆ ಮತ್ತು

ಹಿಂಸಾಚಾರಕ್ಕೆ ಎಷ್ಟೊಂದು ಹೆಸರುಗೊಂಡಿದ್ದರೆಂದರೆ ಅವರು ತಮ್ಮ ಸುತ್ತಲಿನ ಎಲ್ಲವನ್ನೂ "ಕೆಡಿಸಿದರು" (ಅಥವಾ "ನಾಶಗೊಳಿಸಿದ್ದರು") ಮತ್ತು ವಿಕೃತಗೊಳಿಸಿದ್ದರು (6:11, 12). ಲೋಕವನ್ನು ಮತ್ತು ಮನುಷ್ಯನನ್ನು ಉಂಟು ಮಾಡುವದರಲ್ಲಿ ದೇವರಿಗಿದ್ದ ಮೂಲ ಯೋಜನೆಗೆ ಅವರು ಭಂಗ ತಂದಿದ್ದರು, ಆ ಯೋಜನೆಯು ಯಾವದೆಂದರೆ ಎಲ್ಲಾ ಜೀವಕ್ಕೆ ಆಶೀರ್ವಾದವುಂಟು ಮಾಡಬೇಕೆಂಬುದೇ ಆಗಿತ್ತು (1:24-31). ಲೋಕಕ್ಕೆ ಒಂದು ಆಶೀರ್ವಾದವಾಗಿರುವದರ ಬದಲಾಗಿ, ಅವರು ಭೂಮಿಯ ನಿವಾಸಿಗಳೊಳಗೆ ಸಕಲ ವಿಧವಾದ ಕೆಟ್ಟತನವು ಬೆಳೆಯುವಂತೆ ಅವಕಾಶ ಮಾಡಿಕೊಟ್ಟರು.

*ದೇವರ ನ್ಯಾಯತೀರ್ಪು ಮತ್ತು ಕೃಪೆ.*

1. ದೇವರ ನ್ಯಾಯತೀರ್ಪಿಗೆ ಗುರಿಯಾಗಿದ್ದ ಲೋಕದ ಮೇಲೆ ಪ್ರಳಯವು ಬಂದಿತ್ತು. ದೇವರು ಎಲ್ಲೆಡೆಯೂ ನೋಡಿದ ಕೆಟ್ಟತನವು ಆತನ ಹೃದಯಕ್ಕೆ ಬಹಳಷ್ಟು ನೋವುಂಟು ಮಾಡಿತ್ತು, ತನ್ನ ಮಕ್ಕಳ ಜೀವಿತಗಳಲ್ಲಿ ವಿನಾಶಕರವಾದ ನಡವಳಿಕೆಯನ್ನು ನೋಡುವ ಪ್ರೀತಿಯುಳ್ಳ ಯಾವದೇ ತಂದೆ ಅಥವಾ ತಾಯಿಯ ಹೃದಯದಲ್ಲಾಗುವಂತೆಯೇ ಆತನಿಗಾಗಿತ್ತು. ಹೆತ್ತವರು ತಮ್ಮ ಮಕ್ಕಳ ಕಡೆಗೆ ಹೊಂದಿರುವ ಪ್ರೀತಿಗಿಂತಲೂ ದೇವರು ಮಾನವರ ಮೇಲೆ ಇಟ್ಟಿರುವ ಪ್ರೀತಿಯು ಬಹಳ ದೊಡ್ಡದಾಗಿರುವದರಿಂದ, ಆತನ ಜನರಲ್ಲಿರುವ ಕೆಟ್ಟತನವನ್ನು ನೋಡಿ ಆತನಿಗಾಗುವ ನೋವು ಮತ್ತು ವೇದನೆಗಳು ಇನ್ನೆಷ್ಟು ಹೆಚ್ಚಿರಬಹುದು! ವ್ಯಕ್ತಿಗಳು ಕೆಟ್ಟ ಆಲೋಚನೆಗಳನ್ನು ಮಾಡಿಕೊಳ್ಳುತ್ತಾ ಕಲ್ಪನೆ ಮಾಡಬಹುದಾದ ಸಕಲ ಘೋರವಾದ ಅಪರಾಧವನ್ನು ಮಾಡುವಾಗ, ದೇವರ ನೀತಿಯುಳ್ಳ ಹೃದಯಕ್ಕೆ ನೋವುಂಟಾಗುತ್ತದೆ (6:5-7; ಹೋಶೇಯ 11:1-8). ಈ ಕಾರಣಕ್ಕಾಗಿ, ಯೆಹೋವನು ನೋಹನ ಕಾಲದಲ್ಲಿ ಒಂದು ಮಹಾ ಜಲ ಪ್ರಳಯದ ಮೂಲಕವಾಗಿ ಭೂಮಿಯ ಮೇಲೆ ನ್ಯಾಯತೀರ್ಪು ಬರುವದೆಂದು ಘೋಷಿಸಿದನು (6:13, 17).

ಪಾಪಿಗಳಿಗೆ ದಂಡನೆಯನ್ನು ನೀಡುವ ರೌದ್ರಭರಿತ ದೇವರನ್ನು ಅರ್ಥಮಾಡಿಕೊಳ್ಳಬೇಕಾದರೆ, ನಾವು ಆತನ ಪ್ರತೀಕಾರವನ್ನು ಆತನ ಪ್ರೀತಿ ಮತ್ತು ಪರಿಶುದ್ಧತೆಯ ಹಿನ್ನಲೆಯೊಂದಿಗೆ ಕಾಣತಕ್ಕದ್ದು. ಯೆಹೋವನು ಪಾಪವನ್ನು ನೋಡಿ ಅದು ಪ್ರಾಮುಖ್ಯವಲ್ಲವೆಂಬಂತೆ ಕಣ್ಣನು ಮಿಟಕಿಸುವದಕ್ಕೆ ಸಾಧ್ಯವಿಲ್ಲ, ದಂಡನೆಯ ಭಯವಿಲ್ಲದೆ ಪಾಪ ಮಾಡುವಂತೆ ಆತನು ಮನುಷ್ಯನಿಗೆ ಅವಕಾಶವನ್ನು ಕೊಡುವದಿಲ್ಲ. ಕೆಟ್ಟ ಕೃತ್ಯಗಳಲ್ಲಿ ಮುಂದುವರೆಯುವ ದುಷ್ಟರ ವಿರುದ್ಧವಾಗಿ ಆತನು ನ್ಯಾಯತೀರ್ಪನ್ನು ಬರಮಾಡಲೇ ಬೇಕಾಗಿರುತ್ತದೆ. ಕೆಲವು ಸಾರಿ ರೌದ್ರ ಮತ್ತು ಪ್ರೀತಿಗಳನ್ನು ವಿರುದ್ಧವಾದವುಗಳೆಂದು ಕಾಣಲಾಗುತ್ತದೆ. ಜನರು ಹೀಗೆ ಕೇಳುತ್ತಾರೆ, "ಪ್ರೀತಿಯೇ ದೇವರ ಪ್ರಮುಖ ಗುಣಸ್ವಭಾವ ಆಗಿರುವದಾದರೆ, ಆತನು ಪಾಪಿಗಳ ವಿರುದ್ಧವಾಗಿ ರೌದ್ರವನ್ನು ಸುರಿಸುವಂಥ ದೇವರಾಗಿರುವದಕ್ಕೆ ಹೇಗೆ ಸಾಧ್ಯ?" ರೌದ್ರವು ಪ್ರೀತಿಗೆ ವಿರುದ್ಧವಾದದ್ದಲ್ಲ; ಪ್ರೀತಿಗೆ ವಿರುದ್ಧವಾದದ್ದೆಂದರೆ ಉದಾಸೀನತೆಯೇ.

ಒಬ್ಬ ಗಂಡನಿಗೆ ನಿರಂತರವಾಗಿ ಅಪನಂಬಿಗಸ್ತಳಾಗಿರುವ ಹೆಂಡತಿಯೊಬ್ಬಳು ಇರುವದಾದರೆ ಮತ್ತು ಆತನು ಅದರ ಕುರಿತು ಅಸಡ್ಡೆಯಿಂದ ಇರುವದಾದರೆ, ಆತನಿಗೆ ಅವಳ ಮೇಲೆ ಪ್ರೀತಿಯೇ ಇಲ್ಲವೆಂಬುದಾಗಿ ಅವನ ಸ್ನೇಹಿತರು ಸ್ವಾಭಾವಿಕವಾಗಿಯೇ ನಿರ್ಣಯಕ್ಕೆ ಬರುವರು. ಅವರು ಆ ವಿಧದಲ್ಲಿ ಭಾವಿಸಿಕೊಂಡಿದ್ದು ಸರಿಯಾಗಿಯೇ ಇರಬಹುದಾಗಿದೆ! ಆತನು ಆಕೆಯನ್ನು ನಿಜವಾಗಿಯೂ ಪ್ರೀತಿಸಿದ್ದೇ ಆಗಿರುವದಾದರೆ, ಆತನಲ್ಲಿ ನೀತಿಯುಳ್ಳ ಕೋಪವು ತುಂಬಿಕೊಳ್ಳುವುದು. ಆತನು ಕೋಪಗೊಳ್ಳುವುದು ನ್ಯಾಯಯುತವಾಗಿಯೇ ಇರಬಲ್ಲದು

ಯಾಕೆಂದರೆ ಸೃಷ್ಟಿಯ ಕಾಲದಿಂದಲೂ ಮದುವೆಯ ವಿಷಯದಲ್ಲಿ ದೇವರು ಉದ್ದೇಶವು ಅದು ಒಬ್ಬ ಪುರುಷ ಮತ್ತು ಸ್ತ್ರೀಯರ ನಡುವೆ ಇರಬೇಕಾದ ಪ್ರತ್ಯೇಕ ಸಂಬಂಧವಾಗಿರಬೇಕೆಂಬುದೇ ಆಗಿತ್ತು. ಅಂತಹ ಒಂದು ಬಂಧವು ಯಾವದೇ ವಿರೋಧಿಗಳನ್ನು ಸಹಿಸಿಕೊಳ್ಳುವಂಥದಲ್ಲ.

ದೇವರು ಮನುಷ್ಯನೊಂದಿಗೆ ಇಟ್ಟುಕೊಂಡಿರುವ ಸಂಬಂಧವು ಮದುವೆಗೆ ಸಾದೃಶ್ಯವಾಗಿದೆ; ತನ್ನ ಜನರಲ್ಲಿರುವ ದೈವಿಕ ಸ್ವರೂಪವನ್ನು ಕೆಡಿಸುವಂತಹ ಅಪನಂಬಿಗಸ್ತಿಕೆಯ ಕೃತ್ಯಗಳನ್ನಾಗಲಿ ಅಥವಾ ಅವರ ಸೃಷ್ಟಿಕರ್ತನ ಪರಿಶುದ್ಧತೆ ಮತ್ತು ಗುಣಸ್ವಭಾವದ ಮೇಲೆ ಪ್ರತಿಕೂಲವಾದ ಪ್ರತಿಫಲನವನ್ನು ಬೀರುವದಾದರೆ ಆತನು ಅದನ್ನು ಸಹಿಸಿಕೊಳ್ಳುವದಿಲ್ಲ. ಆತನು ಬೇರೆ ಯಾವದೇ ಪ್ರಿಯಕರರಿಗೆ (ದೇವರುಗಳಿಗೆ) ಅವಕಾಶವನ್ನು ಕೊಡುವದಿಲ್ಲ; ಮತ್ತು ಮನುಷ್ಯನು ಬೇರೆ ದೇವರುಗಳಿಗೆ (ನಿಜವಾದವುಗಳಾಗಿರಲಿ ಅಥವಾ ಕಲ್ಪನಾತ್ಮಕವಾಗಿರಲಿ) ತನ್ನ ನಿಷ್ಠೆಯನ್ನು ತೋರಿಸುವಾಗ, ಯೆಹೋವನು ಒಂದು ಭಕ್ತಿಯ ಅಸೂಯೆಯಿಂದ ಕೋಪಗೊಳ್ಳುವನು (ವಿಮೋಚನಕಾಂಡ 20:5).

ನಮ್ಮ ಪ್ರೀತಿಯುಳ್ಳ ದೇವರು ನಮ್ಮನ್ನು ಉಂಟು ಮಾಡಿದನು, ಎಲ್ಲರಿಗೂ ಜೀವವನ್ನು ಕೊಡುತ್ತಾನೆ, ನಮಗೆ ಸಕಲ ಆಶೀರ್ವಾದಗಳನ್ನು ನೀಡಿ ಆಶೀರ್ವದಿಸುತ್ತಾನೆ (ಯಾಕೋಬ 1:17), ಮತ್ತು ಪ್ರತಿಯೊಬ್ಬ ವ್ಯಕ್ತಿಯೊಂದಿಗೆ, ಆತನ ಬಗ್ಗೆ ತಿಳುವಳಿಕೆಯಿಲ್ಲದವರೊಂದಿಗೆ ಸಹ ವೈಯಕ್ತಿಕ ಸಂಬಂಧವನ್ನಿಟ್ಟುಕೊಳ್ಳಲು ಬಯಸುತ್ತಾನೆ. ಅನ್ಯಧರ್ಮಿಯ ಅಥೇನೆಯ ಜನರಿಗೆ, ಪೌಲನು ಒತ್ತಿ ಹೇಳಿದ್ದೇನೆಂದರೆ ಒಬ್ಬನೇ ಸತ್ಯ ದೇವರು ವೈಯಕ್ತಿಕವಾದವನು ಮತ್ತು "ನಮ್ಮಲ್ಲಿ ಒಬ್ಬರಿಗೂ ದೂರವಾದವನಲ್ಲ" ಎಂಬುದೆ (ಅಪೊಸ್ತಲರ ಕೃತ್ಯಗಳು 17:27), ಆತನು ಅರಿಸ್ಟೊಟಲನ ಕಲ್ಪನೆ ಮಾಡಿಕೊಂಡ ಸೃಷ್ಟಿಕರ್ತನಂತೆ "ಕದಲದೆಯೇ ಕದಲುವ" ವೈಯಕ್ತಿಕವಲ್ಲದ ದೇವರಿಗೆ ವಿರುದ್ಧವಾಗಿರುತ್ತಾನೆ.[41] ಪೌಲನು "ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ಇರುತ್ತೇವೆ" ಎಂಬುದಾಗಿ ದೃಢಪಡಿಸುತ್ತಾನೆ (ಅಪೊಸ್ತಲರ ಕೃತ್ಯಗಳು 17:28). ನಾವು ದೇವರಿಂದ ನಿರ್ಮಿಸಲ್ಪಟ್ಟಿರುವ ಜೀವಿಗಳಾಗಿ ಇರುವದರಿಂದ, ನಾವು ನಮ್ಮ ಜೀವಿತಗಳನ್ನು ಹೇಗೆ ಜೀವಿಸುತ್ತೇವೆ ಎಂಬುದಕ್ಕೆ ಆತನಿಗೆ ಜವಾಬ್ದಾರರಾಗಿದ್ದೇವೆ.

ಖಂಡಿತವಾಗಿಯೂ, ಅಹಂಭಾವದಿಂದ ತುಂಬಿರುವ ಮಾನವರು ಇದನ್ನು ಕೇಳಿಸಿಕೊಳ್ಳಲು ಬಯಸುವದಿಲ್ಲವಷ್ಟೆ, ಮತ್ತು ಕೆಲವರಿಗೆ ನ್ಯಾಯಯುತವಲ್ಲವೆಂದು ಅನ್ನಿಸಬಹುದು. ಹಾಗಿದ್ದಾಗ್ಯೂ, ನಾವು ಆತನ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿರುವ ನೈತಿಕ ಜೀವಿಗಳಾಗಿದ್ದೇವೆ, ಮತ್ತು ದೇವರು ತನ್ನ ಧರ್ಮಶಾಸ್ತ್ರವನ್ನು ನಮ್ಮ ಹೃದಯಗಳ ಮೇಲೆ ಬರೆದಿದ್ದಾನೆ (ರೋಮಾ 2:14, 15). ನಾವು ಅಸಹ್ಯಕರವಾದ ಪಾಪಗಳನ್ನು ಮತ್ತು ಅಪರಾಧಗಳನ್ನು ಮಾಡುವಾಗ, ಆತನ ಮುಂದೆ ನಾವು "ಉತ್ತರವಿಲ್ಲದವರಾಗುತ್ತೇವೆ" (ರೋಮಾ 1:20) ಮತ್ತು "ಮರಣಕ್ಕೆ ಪಾತ್ರರಾಗಿದ್ದೇವೆ" (ರೋಮಾ 1:32). ಆ ಕಾರಣದಿಂದಲೇ ಪೌಲನು "ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆಕೊಡುತ್ತಾನೆ. ಯಾಕಂದರೆ ಆತನು ನಿಷ್ಕರ್ಷೆಮಾಡಿದ … ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿವಸವನ್ನು ಗೊತ್ತುಮಾಡಿದ್ದಾನೆ" ಎಂಬ ದೇವರ ಅಪ್ಪಣೆಯನ್ನು ಕುರಿತು ಸಾರುವಂತೆ ನಡಿಸಲ್ಪಟ್ಟನು (ಅಪೊಸ್ತಲರ ಕೃತ್ಯಗಳು 17:30, 31). ನಿಜವಾಗಿ ನೋಡುವಾದರೆ, ದೇವರು ನೋಹನಿಗೆ ನೀಡಿದ ಸಂದೇಶವು ಇದೇ ಆಗಿತ್ತು: "ದುಷ್ಟರ ಮೇಲೆ ಒಂದು ವಿಶ್ವವ್ಯಾಪಿ ಪ್ರಳಯದ ಮೂಲಕವಾಗಿ ನ್ಯಾಯತೀರ್ಪು ಬರುತ್ತಿದೆ, ಆದ್ದರಿಂದ ನೀತಿಯುಳ್ಳ ಶೇಷ ಜನರು ಅದರಲ್ಲಿ ಬದುಕುಳಿಯುವದಕ್ಕಾಗಿ ನೀನು

ಒಂದು ನಾವೆಯನ್ನು ಸಿದ್ಧಪಡಿಸಬೇಕು." (ನೋಡಿರಿ 6:13-21.)

2. ದೇವರ ಕೃಪೆ ಮತ್ತು ನ್ಯಾಯತೀರ್ಪುಗಳು ಸಾರಲ್ಪಟ್ಟಂಥ ಲೋಕದ ಮೇಲೆ ಪ್ರಳಯವು ಬಂದಿತ್ತು. ಆದಿಕಾಂಡದಲ್ಲಿನ ಚರಿತ್ರೆಯು ಹೇಳುವದೇನೆಂದರೆ, ನೋಹನು ಪಾಪ ಮತ್ತು ಭ್ರಷ್ಟತೆಯಿಂದ ಕೂಡಿದ ಲೋಕದ ನಡುವೆ ಒಬ್ಬ "ನೀತಿವಂತ" ಮತ್ತು "ತಪ್ಪಿಲ್ಲದ" ಮನುಷ್ಯನಾಗಿದ್ದನು, ಮತ್ತು ಅವನಿಗೆ "ಯೆಹೋವನ ದಯೆಯು ದೊರಕಿತು" ಎಂದು ತಿಳಿಸುತ್ತದೆ (6:8, 9). ಈ ವಿಧವಾದ "ದಯೆ" (חֵן, *ಚೆನ್*) ಯೋಗ್ಯತೆಯನ್ನು ಆಧರಿಸಿದ್ದಲ್ಲ; ಇದು ಸಂಪಾದಿಸಿಕೊಳ್ಳಲಾಗದ ಅಥವಾ ಯೋಗ್ಯತೆಯಿಂದ ಪಡೆದುಕೊಳ್ಳಲಾಗದ ಕೃಪೆಯಾಗಿರುತ್ತದೆ. ಭ್ರಷ್ಟಗೊಂಡಿರುವ ಪಾಪಿಗಳ ಲೋಕದ ಮಧ್ಯದಲ್ಲಿ ನೋಹನನ್ನು ನೋಡಿದವನಾಗಿ, ದೇವರು ಅವನ ಮೇಲೆ ತನ್ನ ಪ್ರೀತಿಯನ್ನಿಟ್ಟನು. ದೊಡ್ಡ ಪ್ರಳಯವನ್ನು ಬರಮಾಡಿ ಭೂನಿವಾಸಿಗಳನ್ನು ನಾಶಗೊಳಿಸುವ ತನ್ನ ದೃಢಸಂಕಲ್ಪದ ಕುರಿತು ಆತನು ನೋಹನಿಗೆ ತಿಳಿಸಿದನು, ಮತ್ತು ಆತನು ನೋಹ, ಆತನ ಕುಟುಂಬ, ಮತ್ತು ನಾವೆಯೊಳಗೆ ಕರೆದು ತರಬೇಕಾಗಿದ್ದ ಪ್ರಾಣಿಗಳನ್ನು ಇದರಿಂದ ಹೊರತಾಗಿಸುವ ಯೋಜನೆಯೊಂದನ್ನು ಒದಗಿಸಿದನು.

ನಾವೆಯನ್ನು ಕಟ್ಟುವ ಕೆಲಸದ ಜೊತೆಯಲ್ಲಿ, ನೋಹನು ಒಬ್ಬ "ಸುನೀತಿಯನ್ನು ಬೋಧಿಸುವವನಾಗಿ" ನೇಮಿಸಲ್ಪಟ್ಟನು (2 ಪೇತ್ರ 2:5), ಆತನು ಸನ್ನಿಹಿತವಾಗಿದ್ದ ಪ್ರಳಯದಲ್ಲಿ ಅವರಿಗಾಗುವ ನಾಶನವನ್ನು ತಪ್ಪಿಸಿಕೊಳ್ಳುವಂತಾಗಲು ಭಕ್ತಿಹೀನರನ್ನು ಪಶ್ಚಾತ್ತಾಪ ಪಡುವಂತೆ ಕರೆಯುವವನಾಗಿದ್ದನು. ಇದು ದೇವರ ದೀರ್ಘಶಾಂತಿ ಮತ್ತು ಕನಿಕರವನ್ನು ತೋರಿಸಿ ಕೊಡುತ್ತದೆ. "ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ" ಇರುವವನು (2 ಪೇತ್ರ 3:9). ನೋಹನು ಎಷ್ಟು ಕಾಲದ ವರೆಗೆ ಬೋಧಿಸಿದನು ಅಥವಾ ಆತನು ನಾವೆಯನ್ನು ಕಟ್ಟಿ ಮುಗಿಸುವ ವೇಳೆ ಎಷ್ಟು ಸಮಯವು ಗತಿಸಿತ್ತು ಎಂಬುದರ ಬಗ್ಗೆ ಬೈಬಲ್ ನಿಖರವಾಗಿ ತಿಳಿಸುವದಿಲ್ಲ; ಆದರೆ ಪ್ರೇರಿತ ಕಥನವು "ಪೂರ್ವಕಾಲದಲ್ಲಿ ನೋಹನು ನಾವೆಯನ್ನು ಕಟ್ಟಿಸುತ್ತಿರಲು ದೇವರು ದೀರ್ಘಶಾಂತಿಯಿಂದ ಕಾದಿದ್ದಾಗ ಆತನಿಗೆ ಅವಿಧೇಯರಾಗಿದ್ದವರ ಬಳಿಗೆ ಹೋಗಿ ಸುವಾರ್ತೆಯನ್ನು ಸಾರಿದನು. ಆ ನಾವೆಯೊಳಗೆ ಕೆಲವರು ಅಂದರೆ ಎಂಟೇ ಜನರು ಸೇರಿ ನೀರಿನ ಮೂಲಕ ರಕ್ಷಣೆಹೊಂದಿದರು" ಎಂಬದನ್ನಂತೂ ತಿಳಿಸುತ್ತದೆ (1 ಪೇತ್ರ 3:20).

ನೋಹನ ಬೋಧನೆಗೆ ಜನರು ಹೇಗೆ ಪ್ರತಿಕ್ರಿಯಿಸಿದರೆಂಬುದರ ಬಗ್ಗೆ ವಾಕ್ಯವು ಏನನ್ನೂ ಹೇಳುವದಿಲ್ಲವಾದರೂ, ಅವರ ಮೇಲೆ ಅದು ಯಾವದೇ ಜೀವನ ಮಾರ್ಪಡಿಸುವಂತಹ ಪರಿಣಾಮವನ್ನು ಬೀರಲಿಲ್ಲ ಎಂಬುದಾಗಿ ಯೇಸುವಿನ ಮಾತುಗಳಿಂದ ನಾವು ಊಹಿಸಿಕೊಳ್ಳಬಹುದಾಗಿದೆ. ಸ್ಪಷ್ಟವಾಗಿರುವಂತೆ, ಅವರು ನೋಹನನ್ನು ಅಪಹಾಸ್ಯ ಮಾಡಿ ನಕ್ಕರು ಮತ್ತು ತಮ್ಮ ದುಷ್ಟತನದ ಹಾಗೂ ಕಿವಿಗೊಡದ ಜೀವಿತಗಳಲ್ಲಿ ಮುಂದುವರೆದರು. ಯೇಸುವು ಹೀಗೆ ಹೇಳಿದನು, "ಜಲಪ್ರಳಯಕ್ಕೆ ಮುಂಚಿನ ದಿನಗಳಲ್ಲಿ ನೋಹನು ನಾವೆಯಲ್ಲಿ ಸೇರಿದ ದಿನದ ತನಕ ಜನರು ಉಣ್ಣುತ್ತಾ ಕುಡಿಯುತ್ತಾ ಮದುವೆಮಾಡಿಕೊಳ್ಳುತ್ತಾ ಮಾಡಿಕೊಡುತ್ತಾ ಇದ್ದು ಪ್ರಳಯದ ನೀರು ಬಂದು ಎಲ್ಲರನ್ನು ಬಡುಕೊಂಡುಹೋಗುವ ತನಕ ಏನೂ ತಿಳಿಯದೆ ಇದ್ದರಲ್ಲಾ" (ಮತ್ತಾಯ 24:38, 39).

ಜನರು ತಮ್ಮ ಪಾಪದ ಕಡೆಯಿಂದ ವಿಮುಖರಾಗಿ ನೀತಿಯ ಕಡೆಗೆ ತಿರುಗಿಕೊಳ್ಳಲೆಂದು - ಅಂದರೆ, ಪಶ್ಚಾತ್ತಾಪ ಪಡಲೆಂದು-ದೇವರು ತನ್ನ ವಾಕ್ಯವನ್ನು ಒದಗಿಸಿದನು ಮತ್ತು ಬೋಧಕರನ್ನು ಕಳುಹಿಸಿ ಕೊಟ್ಟನು (ಅಪೊಸ್ತಲರ ಕೃತ್ಯಗಳು 20:20; ರೊಮಾ 10:8-14).

ಕ್ರಿಸ್ತನು ದೇವರ ಕುಮಾರನೆಂದು ನಂಬಿಕೆಯನ್ನು ಅರಿಕೆ ಮಾಡುವವರು ತಮ್ಮ ಪಾಪಗಳನ್ನು ಪರಿಹಾರ ಮಾಡಿಕೊಳ್ಳುವಂತೆ ದೀಕ್ಷಾಸ್ನಾನವನ್ನು ಮಾಡಿಸಿಕೊಳ್ಳಬಹುದಾಗಿದೆ (ಅಪೊಸ್ತಲರ ಕೃತ್ಯಗಳು 2:38; 8:37, 38). ಪ್ರಳಯದ ಮೂಲಕವಾಗಿ ಶುದ್ಧೀಕರಿಸಲ್ಪಟ್ಟ ಮೇಲೆ ಲೋಕವು ಒಂದು ಹೊಸ ಆರಂಭವನ್ನು ಪಡೆದುಕೊಂಡ ಪ್ರಕಾರವೇ, ದೇವರು ತನ್ನ ಕಡೆಗೆ ತಿರುಗಿಕೊಳ್ಳುವವರಿಗೆಲ್ಲಾ "ಹೊಸಬರಾಗಿ ನಡೆದುಕೊಳ್ಳಲು" ಸದವಕಾಶವನ್ನು ಒದಗಿಸುತ್ತಾನೆ (ರೋಮಾ 6:4).

## ದೇವರಿಂದಾಗುವ ರಕ್ಷಣೆ (ಅಧ್ಯಾಯ 6)

*ರಕ್ಷಣೆಯಲ್ಲಿ ಯಾವಾಗಲೂ ದೇವರು ಪ್ರಥಮ ಹೆಜ್ಜೆಯನ್ನಿಡುತ್ತಾನೆ.* ಮನುಷ್ಯನು ತನ್ನ ಒಳ್ಳೇ ಗುಣಸ್ವಭಾವ ಮತ್ತು ಕ್ರಿಯೆಗಳ ಮೂಲಕವಾಗಿ ದೇವರ ಸಮೀಪಕ್ಕೆ ಬರಲು ಅಸಮರ್ಥನಾಗಿದ್ದಾನೆ. ಅಲ್ಲದೆ ತನ್ನನ್ನು ಪ್ರೀತಿಸಿ ರಕ್ಷಣೆಯುಂಟು ಮಾಡುವಂತೆ ಅವನು ಯೆಹೋವನನ್ನು ಆಮೀಷಕ್ಕೊಳಪಡಿಸುವದಕ್ಕೆ ಸಹ ಸಾಧ್ಯವಿಲ್ಲ. "ಕೆಟ್ಟುಹೋಗಿರುವದನ್ನು ಹುಡುಕಿ ರಕ್ಷಿಸುವ" (ಲೂಕ 19:10) ಕಾರ್ಯದಲ್ಲಿ ದೇವರು ಮೊದಲು ಕ್ರಮ ಕೈಗೊಂಡನು. ಯೋಹಾನನು ಹೀಗೆ ಹೇಳಿದನು, "ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ" (1 ಯೋಹಾನ 4:19). ನೋಹ ಮತ್ತು ಆತನ ಕಾಲದ ಜನರ ವಿಷಯದಲ್ಲಿಯೂ ಹೀಗೆಯೇ ಆಗಿತ್ತು. ದೇವರು ತನ್ನ ಪ್ರೀತಿಯ ನಿಮಿತ್ತವಾಗಿ, ಮೊದಲ ಹೆಜ್ಜೆಯನ್ನಿಟ್ಟು ನೋಹನನನ್ನು ಯೆಹೋವನಿಗೆ ಪೂರ್ಣ ಹೃದಯದಿಂದ ಸಮರ್ಪಿತನಾಗಿರುವ ನೀತಿವಂತ ವ್ಯಕ್ತಿಯೆಂಬುದಾಗಿ ಕಂಡುಕೊಂಡನು, ಮತ್ತು ಅವನ ಹಾಗೂ ಅವನ ಕುಟುಂಬದ ಮೂಲಕವಾಗಿ ಒಂದು ಹೊಸ ಆರಂಭವನ್ನು ಮಾಡಬೇಕೆಂದು ದೃಢನಿಶ್ಚಯ ಮಾಡಿಕೊಂಡನು. ಅಲ್ಲದೆ ನೋಹನನ್ನು ಬಳಸಿಕೊಂಡು ಆತನ ಸಮಕಾಲೀನರನ್ನು ಭೂಮಿಯ ಮೇಲೆ ಬರಲಿರುವ ವಿನಾಶದ ಕುರಿತಾಗಿ ಎಚ್ಚರಿಸಿ, ಅವರಿಗೆ ಪಶ್ಚಾತ್ತಾಪ ಪಟ್ಟು ಅದರಲ್ಲಿ ನಾಶಗೊಳ್ಳುವದರಿಂದ ತಪ್ಪಿಸಿಕೊಳ್ಳಲು ಒಂದು ಸದವಕಾಶವನ್ನು ಒದಗಿಸುವದಕ್ಕೆ ಪ್ರಥಮ ಹೆಜ್ಜೆಯನ್ನು ಸಹ ದೇವರು ಇಟ್ಟನು.

*ದೇವರ "ಪೂರ್ವಸಂಕಲ್ಪ"ವು ಮಾನವರ ರಕ್ಷಣೆಯನ್ನಾಗಲಿ ಅಥವಾ ದಂಡನೆಯ ತೀರ್ಪನ್ನಾಗಲಿ ಇಷ್ಟಬಂದಂತೆ ನಿರ್ಧರಿಸುವದಿಲ್ಲ.* ದೇವರು ದುಷ್ಟರ ಮೇಲೆ ಒಂದು ಪ್ರಳಯವನ್ನು ಬರಮಾಡುವದಕ್ಕೆ ದೃಢನಿರ್ಧಾರ ಮಾಡಿಕೊಂಡನಾದರೂ, ರಕ್ಷಣೆ ಅಥವಾ ವಿನಾಶವನ್ನು ಆರಿಸಿಕೊಳ್ಳುವ ತೀರ್ಮಾನವನ್ನು ಆತನು ಆಯಾ ವ್ಯಕ್ತಿಗೆ ಬಿಟ್ಟನು. ಪ್ರತಿಯೊಬ್ಬ ವ್ಯಕ್ತಿಯಲ್ಲಿ ಸಹ ದೇವರಿಗೆ ವಿಧೇಯನಾಗುವ ಅಥವಾ ಆತನಿಗೆ ಅವಿಧೇಯನಾಗುವ ಸ್ವೇಚ್ಛಾ-ಚಿತ್ತವಿತ್ತು. ವ್ಯಕ್ತಿಗಳ ಆತ್ಮೀಕ ರಕ್ಷಣೆ ಅಥವಾ ದಂಡನೆಯ ಮಂಡಲದಲ್ಲಿ, ದೇವರು ಯಾವದೇ ವ್ಯಕ್ತಿಯ ವಿಧಿಯನ್ನು ಶರತ್ತುರಹಿತವಾಗಿ ಪೂರ್ವಸಂಕಲ್ಪ ಮಾಡುವದಿಲ್ಲ. ಆತನ ಬಳಿಗೆ "ಬನ್ನಿರಿ" ಎಂಬುದಾಗಿ ಎಲ್ಲರಿಗೂ ಆಮಂತ್ರಣವು ಕೊಡಲ್ಪಟ್ಟಿರುತ್ತದೆ (ನೋಡಿರಿ ಮತ್ತಾಯ 11:28-30; ಯೋಹಾನ 6:44, 45; ಪ್ರಕಟನೆ 22:17). ನೈತಿಕವಾಗಿ ಅತ್ಯುತ್ತಮನಾಗಿರುವ ವ್ಯಕ್ತಿಯು ದೇವರ ಕರೆಗೆ ಕಿವಿಗೊಡಲು ನಿರಾಕರಿಸಿ ನಾಶನಕ್ಕೊಳಗಾಗಬಹುದು, ಅದೇ ವೇಳೆಯಲ್ಲಿ ಅತ್ಯಂಥ ಘೋರ ಪಾಪಿಯೊಬ್ಬನು ಸತ್ಯವನ್ನು ತಿಳಿದುಕೊಂಡು ನಂಬಿಕೆಯೊಂದಿಗೆ ಪ್ರತಿಕ್ರಿಯಿಸಿ ರಕ್ಷಣೆಯನ್ನು ಹೊಂದಿಕೊಳ್ಳುವ ಸಾಧ್ಯತೆಯಿರುತ್ತದೆ (ಲೂಕ 23:39-43; ಅಪೊಸ್ತಲರ ಕೃತ್ಯಗಳು 22:1-16; 1 ತಿಮೊಥೆ 1:12-16).

*ದೈವಿಕ ರಕ್ಷಣೆಯು ಕೃಪೆಯ ಮೇಲೆ ಆಧಾರವಾಗಿದೆ, ಹೊರತು ಮಾನವನ ಯೋಗ್ಯತೆಯ*

*ಮೇಲೆ ಅಲ್ಲ.* ಹಳೆಯ ಮತ್ತು ಹೊಸ ಎರಡೂ ಒಡಂಬಡಿಕೆಗಳಲ್ಲಿಯೂ, ರಕ್ಷಣೆ ಯಾವಾಗಲೂ ಕೃಪೆಯಿಂದ ನಂಬಿಕೆಯ ಮೂಲಕವೇ ಬಂದಿರುತ್ತದೆ, ಹೊರತು ಎಂದಿಗೂ ಯೋಗ್ಯತೆಯನ್ನುಂಟು ಮಾಡುವ ಕ್ರಿಯೆಗಳಿಂದಲ್ಲ (ಎಜ್ರನು 9:8; ಯೆರೆಮೀಯ 31:2; ರೋಮಾ 4:1-8; ಎಫೆಸ 2:8, 9). ಅತ್ಯುತ್ತಮ ವ್ಯಕ್ತಿಯ ನೀತಿವಂತಿಕೆ ಸಹ ದೇವರಿಗೆ ಹೋಲಿಕೆ ಮಾಡಿ ನೋಡುವಾಗ "ಹೊಲೆಯ ಬಟ್ಟೆಯಂತೆ" ಆಗಿರುತ್ತವೆ (ಯೆಶಾಯ 64:6). ರಕ್ಷಣೆ ಹೊಂದಿಕೊಳ್ಳಬೇಕಾದರೆ, ಒಬ್ಬನು ದೇವರ ಆಜ್ಞೆಗಳಿಗೆ ಪ್ರತಿಕ್ರಿಯಿಸಲು ಸಾಕಷ್ಟು ನಂಬಿಕೆಯನ್ನು ಹೊಂದಿರಬೇಕಾಗುತ್ತದೆ. ನೋಹನು ಇದನ್ನೇ ಮಾಡಿದ್ದನು. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೀಗೆ ಹೇಳಿದನು, "ನಂಬಿಕೆಯಿಂದಲೇ ನೋಹನು … ಭಯಭಕ್ತಿಯುಳ್ಳವನಾಗಿ ತನ್ನ ಮನೆಯವರ ಸಂರಕ್ಷಣೆಗೋಸ್ಕರ ನಾವೆಯನ್ನು ಕಟ್ಟಿ ಸಿದ್ಧಮಾಡಿದನು. ಅದರಿಂದ ಅವನು ಲೋಕದವರನ್ನು ದಂಡನೆಗೆ ಪಾತ್ರರೆಂದು ನಿರ್ಣಯಿಸಿಕೊಂಡು ನಂಬಿಕೆಯ ಫಲವಾದ ನೀತಿಗೆ ಬಾಧ್ಯನಾದನು" (ಇಬ್ರಿಯ 11:7).

---

## ಅಡಿಟಿಪ್ಪಣಿಗಳು

[1]1 Enoch 6—11. ಈ ವಾಕ್ಯದ ಒಂದು ಅನುವಾದವು James H. Charlesworth, ed., *The Old Testament Pseudepigrapha* (New York: Doubleday, 1983), 1:15-19ರಲ್ಲಿ ಕಂಡು ಬರುತ್ತದೆ. [2]ಉದಾಹರಣೆಗೆ, ಇಬ್ರಿಯ ವಾಕ್ಯವು ಅಕ್ಷರಶಃ "ದೇವಪುತ್ರರು" ಎಂದಿದ್ದರೆ, NJPSVಯು ಅದನ್ನು "ದೈವಿಕ ಜೀವಿಗಳು" (ದೇವದೂತರು) ಎಂದು ಅನುವಾದಿಸುತ್ತದೆ. ಈ ಅನುವಾದದ ಮೇಲೆ ವ್ಯಾಖ್ಯಾನ ಮಾಡುವವನಾಗಿ, Jon D. Levensonನು ಹೀಗೆ ಬರೆಯುತ್ತಾನೆ, "ಈ ಕ್ಲುಪ್ತ ಕಥಾನಿರೂಪಣೆಯು ಇನ್ನು ಎಷ್ಟೋ ಉದ್ದವಾದ, ಚಿರಪರಿಚಿತವಾದ ಕಟ್ಟುಕಥೆಯನ್ನು ಸಾರಾಂಶಗೊಳಿಸುತ್ತದೆ. ಇದು ದೈವಿಕ ಮತ್ತು ಮಾನವರ ನಡುವಿನ ಸಕಲ ಪ್ರಾಮುಖ್ಯವಾದ ಇನ್ನೊಂದು ಗಡಿಯ ಉಲ್ಲಂಘನೆಯನ್ನು ಕುರಿತು ದಾಖಲಿಸುತ್ತದೆ (vv. 1-2)" (Jon D. Levenson, "Genesis," in *The Jewish Study Bible*, ed. Adele Berlin and Marc Zvi Brettler [New York: Oxford University Press, 2004], 21). [3]ಅನೇಕ ಸಾರಿ, 2 ಪೇತ್ರ 2:4, 5 ಮತ್ತು ಯೂದನು 6 ವಾಕ್ಯಭಾಗಗಳನ್ನು "ದೇವಪುತ್ರರು" ಪಾಪ ಮಾಡಿದಂಥ ದೈವಿಕ ಜೀವಿಗಳಾಗಿದ್ದರು ಎಂಬುದಕ್ಕೆ ಪುರಾವೆಗಳಂತೆ ಬಳಸಲ್ಪಡುತ್ತವೆ, ಆದರೆ ಈ ವಾಕ್ಯಭಾಗಗಳು ಆದಿಕಾಂಡ 6:2ರಲ್ಲಿನ ಪಾಪಕ್ಕೆ ಸಂಬಂಧವನ್ನು ಹೊಂದಿರುವದಿಲ್ಲ. ಈ ವಾಕ್ಯಭಾಗಗಳು ದೇವದೂತರ ಪಾಪ ಮತ್ತು ಬೀಳುವಿಕೆಯ ಬಗ್ಗೆ ಪ್ರಸ್ತಾಪಿಸುತ್ತಾ ಅವರು "ನರಕಕ್ಕೆ ದೊಬ್ಬಿ ನ್ಯಾಯತೀರ್ಪನ್ನು ಹೊಂದುವದಕ್ಕೆ ಇಡಲ್ಪಟ್ಟವರಾಗಿರಬೇಕೆಂದು ಕತ್ತಲೇ ಗುಂಡಿಗಳಿಗೆ" ಒಪ್ಪಿಸಲ್ಪಟ್ಟರು ಎಂದು ಹೇಳುತ್ತವೆ; ಆದರೆ ಅವುಗಳು ಬಹುಶಃ ಆದಿಕಾಂಡ 3ನೇ ಅಧ್ಯಾಯದಲ್ಲಿ ಮಾನವ ಬೀಳುವಿಕೆಗೆ ಮುಂಚಿತವಾಗಿ ಸೈತಾನ ಹಾಗೂ ಆತನ ದೂತರು ಬಿದ್ದು ಹೋದದ್ದರ ಕುರಿತಾಗಿ ಸೂಚಿಸುತ್ತಿರಬಹುದಾಗಿದೆ. [4]ನೋಡಿರಿ "Targum of Onkelos," in *The Targums*, trans. J. W. Etheridge (New York: KTAV Publishing House, 1968), 46. [5]ದಾವೀದನ ವಂಶದಿಂದ ಬಂದ ಅರಸರನ್ನು ದೇವರ ಪುತ್ರರೆಂದು ಕರೆಯಲಾಗುತ್ತಿತ್ತು (2 ಸಮುವೇಲ 7:14; ಕೀರ್ತನೆ 2:6, 7, 12). [6]ಅಧಿಕಾರದ ಸ್ಥಾನದಲ್ಲಿರುವ ಮಾನವರಾಗಿ, ಅವರು "ಅನ್ಯಾಯವಾಗಿ ತೀರ್ಪುಕೊಡುವವರು" ಮತ್ತು "ದುಷ್ಟರಿಗೆ ಮುಖದಾಕ್ಷಿಣ್ಯ ತೋರಿಸುವವರು" ಆಗಿದ್ದರೆಂದು ದೋಷಾರೋಪಕ್ಕೊಳಗಾದರು (ಕೀರ್ತನೆ 82:2) ಮತ್ತು "ಕುಗ್ಗಿದವರ ಮತ್ತು ಅನಾಥರ ನ್ಯಾಯವನ್ನು ಸ್ಥಾಪಿಸಿರಿ" ಹಾಗೂ "ದುಃಖಿತರ ಮತ್ತು ದರಿದ್ರರ ನೀತಿಯನ್ನು ಉಳಿಸಿರಿ" ಎಂಬುದಾಗಿ ಅವರಿಗೆ ಬುದ್ಧಿವಾದ ಹೇಳಲಾಯಿತು (ಕೀರ್ತನೆ 82:3). ಅವರು ಈ ಬುದ್ಧಿಮಾತಿಗೆ ಕಿವಿಗೊಡದಿದ್ದಲ್ಲಿ, "ನರರಂತೆ ಸತ್ತೇ ಹೋಗುವಿರಿ" ಎಂಬುದಾಗಿ ಅವರನ್ನು ಎಚ್ಚರಿಸಲಾಯಿತು (ಕೀರ್ತನೆ 82:7). [7]John T. Willis, *Genesis*, The Living Word Commentary (Austin, Tex.: Sweet Publishing Co., 1979), 164. [8]ಇನ್ನು ಹಲವಾರು ಆವೃತ್ತಿಗಳು ಸಹ 6:3ರಲ್ಲಿ "ಆತ್ಮ" ಎಂಬುದನ್ನು ದೊಡ್ಡಕ್ಷರದಿಂದ ಆರಂಭಿಸುತ್ತವೆ (ASV; NIV; NKJV; NCV; NLT; ESV). [9]ಈ ಆವೃತ್ತಿಗಳೊಳಗೆ ಕೆಳಗಿನವುಗಳು ಸೇರಿರುತ್ತವೆ: KJV; RSV; NRSV; CEV; NAB; JB; NJB; NEB; REB. [10]Francis Brown, S. R. Driver, and Charles A. Briggs, *A Hebrew and English Lexicon of the Old Testament* (Oxford: Clarendon Press, 1962), 192.

[11]ಈ ವಿಷಯದಲ್ಲಿ, ಇಬ್ರಿಯ ಪದ *ಬಾಸಾರ* ಎಂಬುದು ಹೊಸ ಒಡಂಬಡಿಕೆಯಲ್ಲಿ ಅದರ ಗ್ರೀಕ್ ತದ್ರೂಪವಾದ σάρξ *(ಸಾರ್ಕ್ಸ್)* ರೀತಿಯೇ ಆಗಿರುತ್ತದೆ. [12]Brown, Driver, and Briggs, 142. [13]NIVಯ ಕೆಲವೊಂದು ಮುದ್ರಣಗಳಲ್ಲಿ *ಬಾಸಾರ* ಎಂಬುದಕ್ಕೆ "ಭ್ರಷ್ಟಗೊಂಡ" ಎಂಬ ಪದವು ಇರುತ್ತದೆ, ಅದು "ಮರ್ತ್ಯ" ಎಂಬುದಕ್ಕಿಂತ

ಉತ್ತಮ ಅನುವಾದವಾಗಿರುತ್ತದೆ. [14]"Targum of Onkelos," in *The Targums*, 46. [15]Gordon J. Wenham, *Genesis 1—15*, Word Biblical Commentary, vol. 1 (Waco, Tex.: Word Books, 1987), 142. [16]Victor P. Hamilton, *The Book of Genesis: Chapters 1—17*, The New International Commentary on the Old Testament (Grand Rapids, Mich.: Wm. B. Eerdmans Publishing Co., 1990), 269–70. [17]Timothy R. Ashley, *The Book of Numbers*, The New International Commentary on the Old Testament (Grand Rapids, Mich.: Wm. B. Eerdmans Publishing Co., 1993), 243. [18]Gerald L. Mattingly, "Anak," in *The Anchor Bible Dictionary*, ed. David Noel Freedman (New York: Doubleday, 1992), 1:222. [19]ಕಬ್ಬಿಣದ ಮಂಚ ಎಂಬುದಕ್ಕೆ ಬದಲಾಗಿ, ಕೆಲವು ಆವೃತ್ತಿಗಳು ಆ ವಸ್ತುವು ಅಗ್ನಿಶೀಲೆಯಿಂದ ಮಾಡಲ್ಪಟ್ಟ ಶೀಲೆಯ ಶವಪೆಟ್ಟಿಗೆ ಎಂದು ಹೇಳುತ್ತವೆ (NEB; REB; see TEV). [20]ಈ ಆವೃತ್ತಿಗಳು ನೆಫೀಲಿಯರು (ದೈತ್ಯರು) ಎಂಬುದನ್ನು ದೇವದೂತರ ಸಂತಾನ ("ದೇವಪುತ್ರರು") ಮತ್ತು ಸ್ತ್ರೀಯರು ("ಮನುಷ್ಯಪುತ್ರಿಯರು") ಎಂದು ಅನುವಾದಿಸುತ್ತವೆ.

[21]H. J. Stoebe, "נחם," in *Theological Lexicon of the Old Testament*, trans. Mark E. Biddle, ed. Ernst Jenni and Claus Westermann (Peabody, Mass.: Hendrickson Publishers, 1997), 2:738. [22]Ronald B. Allen, "עָצַב," in *TWOT*, 2:687–88. [23]ಇದೇ ಇಬ್ರಿಯ ಪದದ ನಾಮಪದ ರೂಪವು (עִצָּבוֹן, *'ಇಟ್ಸಾಬಾನ)* ಎಂಬುದು 3:16, 17ರಲ್ಲಿ ಆದಾಮ ಮತ್ತು ಹವ್ವಳು ಹಾಗೂ ಅವರ ಸಂತತಿಯವರು ತಮ್ಮ ಪಾಪದ ಪರಿಣಾಮವಾಗಿ ಅನುಭವಿಸಲಿದ್ದ ನೋವುಕರವಾದ ಪರಿಶ್ರಮಕ್ಕೆ (5:29) ಅನ್ವಯಿಸಲ್ಪಟ್ಟಿರುತ್ತದೆ. [24]ಒಂದು ಸಕಾರಾತ್ಮಕ ಅರ್ಥದಲ್ಲಿ, *ಮಕಾಹಾ* ಎಂಬುದು ದೇವರು ಪಾಪವನ್ನು ನಿವಾರಿಸುವುದು ಅಥವಾ ಕ್ಷಮಿಸುವದು ಎಂಬುದನ್ನು ಸೂಚಿಸಲು ಸಹ ಬಳಸಲ್ಪಟ್ಟಿದೆ (ಕೀರ್ತನೆ 51:1, 9; ಯೆಶಾಯ 43:25; 44:22). (Walter C. Kaiser, "מָחָה," in *TWOT*, 1:498–99.) [25]D. N. Freedman and J. R. Lundbom, "חֵן," in *Theological Dictionary of the Old Testament*, trans. David E. Green, ed. G. Johannes Botterweck and Helmer Ringgren (Grand Rapids, Mich.: Wm. B. Eerdmans Publishing Co., 1986), 5:25. [26]J. Barton Payne, "תָּמִים," in *TWOT*, 2:973–74. [27]Hamilton, 278. [28]H. J. Stoebe, "חָמָס," in *TWOT*, 1:437. [29]H. Haag, "חָמָס," in *Theological Dictionary of the Old Testament*, trans. David E. Green, ed. G. Johannes Botterweck and Helmer Ringgren (Grand Rapids, Mich.: Wm. B. Eerdmans Publishing Co., 1980), 4:478–87. [30]ಇನ್ನು ಕೆಲವು 7:1-4; 8:15-17; 9:1-17 ವಾಕ್ಯಗಳಲ್ಲಿ ಸಿಕ್ಕುತ್ತವೆ.

[31]Jack P. Lewis, "Flood," in *The Anchor Bible Dictionary*, 2:798–99. [32]*ಥೆಬಾಹಾ* ಎಂಬ ಇಬ್ರಿಯ ಪದದ ಮೂಲದ ಕುರಿತು ಸ್ಪಷ್ಟತೆಯು ದೊರೆತಿರುವದಿಲ್ಲ. ಇದು "ಸಂದೂಕ," "ಪೆಟ್ಟಿಗೆ," ಅಥವಾ "ಶವಪೆಟ್ಟಿಗೆ" ಎಂಬ ಅರ್ಥ ಕೊಡುವಂಥ ಐಗುಪ್ತದ ಎರವಲು ಪದದಿಂದ ಬಂದಿರಬಹುದಾಗಿದೆ (Bruce K. Waltke, "Ark of Noah," in *The International Standard Bible Encyclopedia*, rev. ed., ed. Geoffrey W. Bromiley [Grand Rapids, Mich.: Wm. B. Eerdmans Publishing Co., 1979], 1:291.) [33]Ronald F. Youngblood, "תֵּבָה," in *TWOT*, 2:964. [34]Irene Jacob and Walter Jacob, "Flora," in *The Anchor Bible Dictionary*, 2:805. [35]Kenneth A. Mathews, *Genesis 1—11:26*, The New American Commentary, vol. 1A (Nashville: Broadman & Holman Publishers, 1996), 364. [36]*The Epic of Gilgamesh* 11.30, 57–58. [37]Mathews, 365. [38]Hamilton, 282. [39]7:11 ಮತ್ತು 8:14ರ ಪ್ರಕಾರವಾಗಿ, ನಾವೆಯಲ್ಲಿ ಇದ್ದವರು ಒಂದು ವರ್ಷ ಹತ್ತು ದಿನಗಳ ಕಾಲ ಅದರೊಳಗೆ ಉಳಿದಿದ್ದರು. [40]ಹಲವಾರು ಬೈಬಲ್ ವಚನಗಳು ದೇವರ ರೌದ್ರದ ಬಗ್ಗೆ ಮಾತಾಡುತ್ತವೆ. (ಉದಾಹರಣೆಗೆ, ನೋಡಿರಿ ಧರ್ಮೋಪದೇಶಕಾಂಡ 9:7; 2 ಪೂರ್ವಕಾಲವೃತ್ತಾಂತ 24:18; ಯೆಹೆಜ್ಕೇಲ 7:19; ಎಫೆಸ 5:6; ಕೊಲೊಸ್ಸೆ 3:6.)

[41]Aristotle *Physics* 8.6.